# ಆಟಿಸಂ ಇರುವ ಮಕ್ಕಳ ಅಂತರ್ವೇಶನ

## ಶಿಕ್ಷಕರಿಗೆ ಕೈಪಿಡಿ

ನ್ಯಾಷನಲ್ ಟ್ರಸ್ಟ್,

ಆಟಿಸಂ, ಸೆರಬ್ರಲ್ ಪಾಲ್ಸಿ* ಬುದ್ಧಿಮಾಂದ್ಯತೆ ಮತ್ತು ಬಹುವಿಕಲತೆಯುಳ್ಳ ವ್ಯಕ್ತಿಗಳ ಕಲ್ಯಾಣಕ್ಕಾಗಿ
(ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಭಾರತ ಸರಕಾರ)

ಕಸ್ತೂರಬಾ ಗಾಂಧಿ ಮಾರ್ಗ

ನವದೆಹಲಿ-110001, ಟೆಲಿ-011-43520861-64

ಇ-ಮೇಲ್:nationaltrust@nic.in

ವೆಬ್ ಸೈಟ್:www.nationaltrust.org.in

*ಸೆರಬ್ರಲ್ ಪಾಲ್ಸಿ ಎಂಬ ಪದ ಬಳಸುವುದೇ ಉಚಿತ. ಮೆದುಳು ಪಾರ್ಶ್ವವಾಯು ಎನ್ನುವ ಪದ ಬಳಸಿದರೂ ಅದು ಸಂಪೂರ್ಣವಾದ ಚಿತ್ರಣ ನೀಡುವುದಿಲ್ಲ.

ಕೃತಜ್ಞತೆಗಳು:

ಆಕ್ಷನ್ ಫಾರ್ ಎಬಿಲಿಟಿ ಡೆವಲಪ್ ಮೆಂಟ್ ಅಂಡ್ ಇನ್‌ಕ್ಲೂಶನ್ ನಲ್ಲಿ ( ಎ.ಎ.ಡಿ.ಐ) ಸಿದ್ಧಪಡಿಸಲಾಗಿದೆ

ಸು.ಶ್ರೀ ಕನ್ವಲ್ ಸಿಂಗ್ ಅವರಿಂದ ಬರೆದು ವಿನ್ಯಾಸಗೊಳಿಸಲ್ಪಟ್ಟಿದೆ, ಎ.ಎ.ಡಿ.ಐ.

ಸು.ಶ್ರೀ ಗೌರೀ ಅರುಂಧತಿ, ಎ.ಎ.ಡಿ.ಐ ಅವರಿಂದ ಸಜ್ಜುಗೊಳಿಸಲ್ಪಟ್ಟಿದೆ.

ಆಕ್ಷನ್ ಫಾರ್ ಆಟಿಸಂ ನವರು ತಾಂತ್ರಿಕ ಬೆಂಬಲ ಒದಗಿಸಿದ್ದಾರೆ.

ಚಿತ್ರಗಳ ಮೂಲ: 'ಕ್ಲಿಪ್ ಆರ್ಟ್' ( ಎಂಎಸ್ ಆಫೀಸ್)

ಪುಟ ೩ ದಲ್ಲಿನ ನಿದರ್ಶನ: ಕನ್ವಲ್ ಸಿಂಗ್ , ಎ.ಎ.ಡಿ.ಐ

ವಿಷಯಾನುಕ್ರಮಣಿಕೆ


೧.ಶಿಕ್ಷಕರಿಗೆ ಟಿಪ್ಪಣಿ

೨.'ಆಟಿಸಂ' (ಸ್ವಲೀನತೆ) ಎಂದರೇನು

೩.ಮಗುವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ

೪.ಆಟಿಸಂ ಇರುವ ಮಗು ಎದುರಿಸುವ ತೊಂದರೆಗಳು

೪.೧ ಸಂವೇದನೆಗಳನ್ನು ಸಂಸ್ಕರಿಸುವುದರಲ್ಲಿ ತೊಂದರೆ

೪.೨ಸಂವಹನ - ಬಾಷೆಯನ್ನು ಬಳಸುವುದು ಮತ್ತು ಅರ್ಥಮಾಡಿಕೊಳ್ಳುವುದರಲ್ಲಿ ತೊಂದರೆ

೪.೩ಸಾಮಾಜಿಕ ತಿಳುವಳಿಕೆಯಲ್ಲಿ (ಜನರೊಡನೆ ಸಂಬಂಧ ಬೆಳೆಸುವಲ್ಲಿ) ತೊಂದರೆ

೪.೪ ಕಲ್ಪನೆ ಮಾಡಿಕೊಳ್ಳುವುದು, ಆಲೋಚಿಸುವುದು, ಮತ್ತು ಮಾಹಿತಿ ಸಂಘಟಿಸಿಕೊಳ್ಳುವುದರಲ್ಲಿ ತೊಂದರೆಗಳು

೫. ಆಟಿಸಂ' ಅನ್ನು ಗುಣಪಡಿಸಬಹುದೇ?

೬.ಆಟಿಸಂ ಇರುವ ಮಕ್ಕಳು ಸಾಮಾನ್ಯ/ವ್ಯವಸ್ಥಿತ ಶಾಲೆಗೆ ಹೋಗಬಹುದೇ? ಹಾಗಿದ್ದರೆ ಅವರ ಪಠ್ಯಕ್ರಮ ಹೇಗಿರಬೇಕು

೭.ಮಗುವನ್ನು ಸೇರಿಸಿಕೊಳ್ಳುವ ಮೊದಲು ಒಂದು ಶಾಲೆಯು ಏನಾದರೂ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆ? ಸಿಬ್ಬಂದಿಗಳಿಗೆ ಯಾವುದಾದರೂ ತರಬೇತಿಯ ಅಗತ್ಯವಿದೆಯೇ?

೮.ಮಗುವಿ ತಕ್ಕ ಪರಿಸರ ಹಾಗೂ ಬೋಧನಾ ತಂತ್ರಗಳನ್ನು ಒದಗಿಸಲು ಅನುಕೂಲವಾಗುವಂತೆ ಶಾಲೆಯು ಬೆಂಬಲ ಮತ್ತು ತರಬೇತಿ ಪಡೆಯಬಹುದೇ? ನಿಭಾಯಿಸಲು ತೊಂದರೆಯಾದರೆ ಶಾಲೆಗೆ ಯಾರು ಸಹಾಯ ಮಾಡುತ್ತಾರೆ?

೯.ನನಗೆ ಆಟಿಸಂ ಕುರಿತಾದ ಮತ್ತು ಅದಕ್ಕೆ ಸಂಬಂಧಿಸಿದ ತೊಂದರೆಗಳ ಬಗ್ಗೆ ಸ್ವಲ್ಪ ಮಾಹಿತಿ ಇದೆ. ತರಗತಿಯ ಶಿಕ್ಷಕರಾಗಿ ನಾನು ಏನು ಮಾಡಬಹುದು?

೧೦.ಬೆಂಬಲಿಸುವ ಪರಿಸರವನ್ನು ನೀಡಲು ನಾವು ಏನು ಮಾಡುತ್ತೇವೆ?

೧೧.ಸಂರಚಿತ ಪರಿಸರ ಎಂದರೇನು?

೧೧.೧ ಭೌತಿಕ ಪರಿಸರ

೧೧.೨ ಸಾಮಾಜಿಕ - ಸಂವೇಗಾತ್ಮಕ ಪರಿಸರ

೧೧.೩ ಕಲಿಕೆಯ ಪರಿಸರ

೧೨. ಆಟಿಸಂ ಇರುವ ವ್ಯಕ್ತಿಗಳು ಬರೆದಿರುವ ಪುಸ್ತಕಗಳು

೧೩. ತರಗತಿಯಲ್ಲಿ ಆಟಿಸಂ ಅನ್ನು ಪರಿಚಯಿಸಲು ಆಟಗಳು

೧೪. ಆಕರಗಳು

೧೫. ಭಾರತದಲ್ಲಿರುವ ಆಟಿಸಂಗೆಂದೇ ನಿರ್ದಿಷ್ಟವಾದ  ನೋಂದಾಯಿತ ಸಂಸ್ಥೆಗಳು

# ೧.ಶಿಕ್ಷಕರಿಗೆ  ಟಿಪ್ಪಣಿ

“ಆಟಿಸಂ’ (ಸ್ವಲೀನತೆ)  ಇರುವ ಒಂದು ಮಗು ನಿಮ್ಮ ತರಗತಿಗೆ ಸೇರಿಕೊಳ್ಳುತ್ತಿದೆ,

ಒಬ್ಬ ಶಿಕ್ಷಕರಾಗಿ ನೀವು ಅನೇಕ ಸಂವೇಗಗಳಿಂದ ಮಣಿಸಲ್ಪಡುತ್ತೀರಿ. ನಿಮ್ಮ ಮನಸ್ಸಿನಲ್ಲಿ ಬಹಳಷ್ಟು ಪ್ರಶ್ನೆಗಳು ಓಡುತ್ತಿರುತ್ತವೆ………..

- ಆಟಿಸಂ ಎಂದರೆ ಏನು?
- ಆಟಿಸಂ ಇರುವ ಮಗುವನ್ನು ನನ್ನ ತರಗತಿಗೆ ಸೇರಿಸಿಕೊಳ್ಳಲು ನನ್ನ ಬಳಿ ಸಾಕಷ್ಟು ಮಾಹಿತಿಯಿದೆಯೇ?
- ಆ ಮಗುವಿಗೆ ನಾನು ಹೇಗೆ ಪಾಠ ಮಾಡುವೆನು?
- ನಾನು ನ್ಯಾಯ ಒದಗಿಸಲು ಸಾಧ್ಯವೇ?
- ಸೂಕ್ತ ಗಮನ ಸಿಗುವ ವಿಶೇಷ ಶಾಲೆಯಲ್ಲಿ ಓದುವುದು ಆ ಮಗುವಿಗೆ ಒಳ್ಳೆಯದಲ್ಲವೇ?

ಹೌದು, ನಿಮ್ಮೆಲ್ಲ ಪ್ರಶ್ನೆಗಳಿಗೆ ನಿಮಗೆ ಉತ್ತರಗಳ ಅಗತ್ಯವಿದೆ ಹಾಗೂ ನಿಮ್ಮ ಕಾಳಜಿ ಮತ್ತು ಆತಂಕಗಳನ್ನು ನಿವಾರಿಸಬೇಕಿದೆ. ಮೇಲೆ ಪಟ್ಟಿ ಮಾಡಿದ ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಲು ಸಹಾಯ ಮಾಡಲು ಪ್ರಸ್ತುತ ಮಾಹಿತಿ ಮತ್ತು ಅನುಭವಗಳನ್ನು ಆಧರಿಸಿದ ಕೆಲವು ಮುಖ್ಯ ಕಲಿಕೆಗಳನ್ನು ಈ ಕೈಪಿಡಿಯಲ್ಲಿ ನಾವು ಒಟ್ಟುಗೂಡಿಸಿಕೊಟ್ಟಿದ್ದೇವೆ.

‘ಆಟಿಸಂ’ ಬಗ್ಗೆ ಮಾಹಿತಿ ಕೊಡುವುದರ ಜೊತೆಗೆ ಆ ಸ್ಥಿತಿ ಇರುವ ಮಕ್ಕಳ ಒಳಗೊಳ್ಳುವಿಕೆಯನ್ನು (ಅಂತರ್ವೇಶನ)  ಬೆಂಬಲಿಸಲು ಶಾಲೆಯ ಆಡಳಿತ ಹಾಗೂ ಸಿಬ್ಬಂದಿಗಳು ಅನುಸರಿಸಬೇಕಾದ ಕೆಲವು ಉಪಾಯಗಳನ್ನು ಕೂಡಾ ಈ ಕೈಪಿಡಿ ನೀಡುತ್ತದೆ.

ಈ ವಿಧಾನಗಳನ್ನು ಆಟಿಸಂ ಇರುವ ಮಕ್ಕಳಿಗೆ ಎಂದು ಸೂಚಿಸಿದ್ದರೂ, ಇವುಗಳಲ್ಲಿ ಬಹಳಷ್ಟು ಅಭ್ಯಾಸಗಳು ಬೋಧನೆ ಮತ್ತು ಕಲಿಕೆಯು ಉತ್ಸಾಹ ಭರಿತವಾಗಿರುವಂತೆ ಮಾಡಲು ಯಾವುದೇ ಮಗುವಿನೊಡನೆ ಬಳಸಬಹುದು.

ಅಂತರ್ವಿಷ್ಟ (ಒಳಗೊಳ್ಳುವ)  ತರಗತಿಗಳಲ್ಲಿ  ಇರುವ ಮಕ್ಕಳನ್ನು (ಅಸಾಮರ್ಥ್ಯ ಉಳ್ಳ ಅಥವಾ ಇರದ ಮಕ್ಕಳನ್ನು )  ತಲುಪಬೇಕಾದ ಉತ್ತೇಜಕ ಅಲ್ಲದೇ ಸವಾಲೆನಿಸುವ ಕಾರ್ಯಕೈಗೊಂಡ ಎಲ್ಲಾ ಶಿಕ್ಷಕರಿಗೂ ಈ ಕೈಪಿಡಿ  ಒಂದು ಸಂಪನ್ಮೂಲವಾಗುವುದೆಂದು ನಾವು ಆಶಿಸುತ್ತಿದ್ದೇವೆ.

## ೧. 'ಆಟಿಸಂ' ಎಂದರೇನು?

'ಆಟಿಸಂ ಎಂಬುದು ಒಂದು ವಿಕಾಸಾತ್ಮಕ ಅಸಾಮರ್ಥ್ಯವಾಗಿದ್ದು ಸಾಮಾನ್ಯವಾಗಿ ಜೀವನದ ಮೊದಲ ಮೂರು ವರ್ಷಗಳಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ಸ್ ( ಸ್ವಲೀನತಾ ಶ್ರೇಣಿಯ ಅವ್ಯವಸ್ಥೆಗಳು) ಎಂದೇ ಪರಿಚಿತವಾಗಿರುವ ವಿಕಾಸಾತ್ಮಕ ಅವ್ಯವಸ್ಥೆಗಳ ಗುಂಪಿನಲ್ಲಿನ ಒಂದು ಸರ್ವೇಸಾಮಾನ್ಯವಾದ ತೊಂದರೆಯಾಗಿದೆ.

ಆಟಿಸಂ ಇರುವ ವ್ಯಕ್ತಿಗಳಲ್ಲಿ ತೊಂದರೆ ಇರುವ ಮೂರು ಮುಖ್ಯ ಕ್ಷೇತ್ರಗಳೆಂದರೆ.

| |
|---|
| ಸಾಮಾಜಿಕ ಸಂಬಂಧಗಳು<br>(ಜನರೊಡನೆ ಅಂತರಕ್ರಿಯೆ) |

| |
|---|
| ಸಂವಹನ<br>(ಮಾತನಾಡುವುದು ಹಾಗೂ ಬೇರೆಯುವರು ಏನು ಹೇಳುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳುವುದು) |

| |
|---|
| ಕಲ್ಪನೆ<br>(ಅಸಾಮಾನ್ಯ ಮತ್ತು ಪುನರಾವರ್ತಿತ ವರ್ತನೆ ಹಾಗೂ ಆಸಕ್ತಿಗಳ ಇರುವಿಕೆ) |

'ಆಟಿಸಂ' ಎನ್ನುವುದು ಒಂದು ಶ್ರೇಣಿಯನ್ನು (Spectrum) ಹೊಂದಿರುವ ಅವ್ಯವಸ್ಥೆ ಎಂದು ಹೇಳುತ್ತಾರೆ. ಏಕೆಂದರೆ ಇದರ ಗುಣಲಕ್ಷಣಗಳು ಒಂದು ದೊಡ್ಡ ಹರವು ಅಥವಾ ಶ್ರೇಣಿಯನ್ನು ಹೊಂದಿವೆ. ಈ ಗುಣಲಕ್ಷಣಗಳು ಒಂದು ಸೌಮ್ಯ ಕಲಿಕೆಯ ಮತ್ತು ಸಾಮಾಜಿಕ ಅಸಾಮರ್ಥ್ಯತೆಯಿಂದ ಹಿಡಿದು ಬಹು ಸಮಸ್ಯೆಗಳು ಮತ್ತು ತೀವ್ರ ಅಸಾಮಾನ್ಯ ವರ್ತನೆಯುಳ್ಳ ಗಂಭೀರವಾದ ದುರ್ಬಲತೆಯವರೆಗೂ ಹರಡಿವೆ. ಪ್ರತಿಭೆ - ಸಾಮಾನ್ಯ ಬುದ್ಧಿವಂತಿಕೆ - ತೀವ್ರ ವಿಕಲತೆಯವರೆಗೂ ಆಲೋಚನಾ ಮತ್ತು ಕಲಿಕೆಯ ಸಾಮರ್ಥ್ಯಗಳು ಬದಲಾಗುತ್ತದೆ. ಆಟಿಸಂ ಇರುವ ವ್ಯಕ್ತಿಯು ಎಲ್ಲರಂತೆ ಸಾಮಾನ್ಯ ಶಾಲೆಗೆ ಹೋಗಬಹುದು, ಕೆಲಸವನ್ನು ಹುಡುಕಿಕೊಳ್ಳಬಹುದು ಹಾಗೂ ತಕ್ಕ ಮಟ್ಟಿಗೆ ಸ್ವತಂತ್ರ ಜೀವನವನ್ನು ನಡೆಸಬಹುದು. ಆದರೆ ಅವರಿಗೆ ಬೇರೆಯವರೊಂದಿಗೆ ಮಾತನಾಡಲು ಮತ್ತು ಬೆರೆಯಲು ತೊಂದರೆ ಇರಬಹುದು. ಆಟಿಸಂನಿಂದ ಮಧ್ಯಮ ಅಥವಾ ತೀವ್ರ ತೊಂದರೆಗಳಿರುವ ಮಕ್ಕಳಲ್ಲಿ ಬಹಳಷ್ಟು ವ್ಯತ್ಯಾಸಗಳಿರುತ್ತವೆ. ಕೆಲವು ಮಕ್ಕಳು ಬೆಂಬಲ ನೀಡುವ ಪರಿಸರದಲ್ಲಿ ಚೆನ್ನಾಗಿ ಅಭಿವೃದ್ಧಿ ಹೊಂದಬಹುದು ಮತ್ತು ಕೆಲವರು ಹೊಂದದಿರಬಹುದು. ಕೆಲವು ಮಕ್ಕಳಿಗೆ ಮಾತು ಬರದೆ ಇರಬಹುದು ಮತ್ತು ಕೆಲವರಿಗೆ ಮಾತು ಬಂದರೂ ಸಂವಹನ ನಡೆಸಲು ಕಷ್ಟ ಪಡಬಹುದು.

ಆಟಿಸಂ ಅಲ್ಲದೇ ಕೆಲವು ಬೇರೆಯ ಲಕ್ಷಣ/ಸ್ಥಿತಿಗಳನ್ನೂ ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ಸ ನಲ್ಲಿ ಸೇರಿಸಲಾಗಿದೆ. ಅವುಗಳೆಂದರೆ:

ಆಸ್ಪರ್ಗರ್ಸ್ ಸಿಂಡ್ರೋಮ್,( Asperger's syndrome) ( ಸ್ವಲೀನತಾ ಶ್ರೇಣಿಯ ಅವ್ಯವಸ್ಥೆಗಳ ಒಂದು ವಿಧ. ಇದರಲ್ಲಿ ಸಾಮಾಜಿಕ ಹೊಂದಾಣಿಕೆ ಕಷ್ಟವಾಗಿದ್ದು ಮಕ್ಕಳು ಒಂದೇ ರೀತಿಯ ಪುನರಾವರ್ತಿತ ಚಟುವಟಿಕೆ ತೋರುತ್ತಾರೆ)

ರೆಟ್ಸ್ ಸಿಂಡ್ರೋಮ್ (Rett's Syndrome) (ಬಹಳ ಅಪರೂಪವಾದ ನರವ್ಯವಸ್ಥೆಯ ತೊಂದರೆ . ಹೆಚ್ಚಾಗಿ ಹೆಣ್ಣುಮಕ್ಕಳಲ್ಲಿ ಕಂಡು ಬರುವ ಕಾಯಿಲೆ. ವಂಶವಾಹಿಗಳಿಂದ ಉಂಟಾಗಿದ್ದು ಮಗುವಿನ ಎಲ್ಲಾ ವಿಕಾಸವನ್ನೂ ದುರ್ಬಲಗೊಳಿಸುತ್ತದೆ)

ಪರ್ವೇಸಿವ್ ಡೆವಲಪ್ ಮೆಂಟಲ್ ಡಿಸಾರ್ಡರ್ಸ- ನಾಟ್ ಅದರ್ ವೈಸ್ ಸ್ಪೆಸಿಫೈಡ್ (Pervasive Developmental disorders, not otherwise specified) (ಪಿಡಿಡಿ-ಎನ್ ಓ ಎಸ್) (ರೋಗನಿದಾನ ವರ್ಗೀಕರಣದಲ್ಲಿ ನಮೂದಿಸಿರುವ ಒಂದು ರೀತಿಯ ವಿಕಾಸಾತ್ಮಕ ಅವ್ಯವಸ್ಥೆ- ಸಂವಹನ ಮತ್ತು ಸಾಮಾಜಿಕ ಚಟುವಟಿಕೆಯಲ್ಲಿ ಹಿನ್ನಡೆ ಇರುತ್ತದೆ).

- ಮೆದುಳಿನ ಅಪಸಾಮಾನ್ಯ ಕ್ರಿಯೆಯಿಂದ 'ಆಟಿಸಂ' ಉಂಟಾಗುತ್ತದೆ.
- ನಿರ್ಲಕ್ಷ್ಯ ಅಥವಾ ಕೆಟ್ಟ ಪಾಲನೆಯಿಂದ ಆಟಿಸಂ ಉಂಟಾಗುವುದಿಲ್ಲ
- ಆಟಿಸಂಗೆ ಒಳಗಾದ ಮಕ್ಕಳಲ್ಲಿ ೮೦% ಬಾಲಕರಾಗಿದ್ದಾರೆ.
- ಆಟಿಸಂ ಪ್ರಪಂಚದಲ್ಲಿ ಎಲ್ಲಾ ರೀತಿಯ ಆರ್ಥಿಕ. ಸಾಮಾಜಿಕ ಮತ್ತು ಜನಾಂಗೀಯ ಹಿನ್ನೆಲೆಗಳಿರುವ ಕುಟುಂಬಗಳಲ್ಲಿ ಕಂಡು ಬರುತ್ತದೆ.
- ಈ ಅವ್ಯವಸ್ಥೆ ಒಂದೇ ಇರಬಹುದು ಅಥವಾ ಬುದ್ಧಿಮಾಂದ್ಯತೆ ಮತ್ತು ಅಪಸ್ಮಾರಗಳ ಜೊತೆಯಲ್ಲಿ ಕಂಡು ಬರಬಹುದು.
- ವಿಶೇಷ ಅಥವಾ ವಿದ್ವತ್ತಿನ ಸಾಮರ್ಥ್ಯಗಳು ಆಟಿಸಂ ಇರುವ ಎಲ್ಲಾ ವ್ಯಕ್ತಿಗಳಲ್ಲಿ ಇರುವುದಿಲ್ಲ. ಕೆಲವು (೧೦%) ವ್ಯಕ್ತಿಗಳಲ್ಲಿ ಅಸಾಮಾನ್ಯ ಚಿತ್ರಕಲಾ ಸಾಮರ್ಥ್ಯಗಳು, ಸಂಗೀತದ ಪ್ರತಿಭೆ, ಅಸಾಧಾರಣ ಸ್ಮರಣ ಶಕ್ತಿ ಅಥವಾ ಮನಸ್ಸಿನಲ್ಲಿ ಮಿಂಚಿನ ವೇಗದಲ್ಲಿ ಲೆಕ್ಕಾಚಾರ ಮಾಡುವುದು ಮೊದಲಾದವುಗಳು ಇರುತ್ತವೆ.

ಮಗುವಿನ ದೈಹಿಕ ಹೊರನೋಟವನ್ನು ಆಟಿಸಂ ಪ್ರಭಾವಿಸುವುದಿಲ್ಲ. ಮಗು ಇತರ ಬೇರೆ ಮಕ್ಕಳಂತೆ ಕಂಡರೂ, ಅದರ ಸಂವಹನ ಮತ್ತು ವರ್ತನೆಯ ಚರ್ಯೆ ಇತರ ಬಹಳಷ್ಟು ಮಕ್ಕಳಿಗಿಂತ ಭಿನ್ನವಾಗಿರುತ್ತದೆ

ಆಟಿಸಂ ಇರುವ ಎಲ್ಲಾ ಮಕ್ಕಳು ವರ್ತನೆ ಮತ್ತು ಅಂತರಕ್ರಿಯೆಯಲ್ಲಿ ಭಿನ್ನಭಿನ್ನವಾಗಿರುತ್ತಾರೆ ಎಂದು ನೆನಪಿನಲ್ಲಿಟ್ಟುಕೊಳ್ಳುವುದು ಬಹಳಮುಖ್ಯ - ಏಕೆಂದರೆ ಆಟಿಸಂ ಇರುವ ಯಾವುದೇ ಎರಡು ಮಕ್ಕಳ ಗುಣಲಕ್ಷಣಗಳು ಒಂದೇ ರೀತಿ ಇರುವುದಿಲ್ಲ .

ಮುದ್ದಿಸುವುದು ಇಷ್ಟವಾಗುವುದಿಲ್ಲ

ಕಣ್ಣಲ್ಲಿ ಕಣ್ಣಿಟ್ಟು ನೋಡುವುದು ಸ್ವಲ್ಪ ಮಟ್ಟಿಗೆ ಇರುತ್ತದೆ ಅಥವಾ ಪೂರ್ತಿ ಇರುವುದಿಲ್ಲ

ಕೆಲವು ವಸ್ತುಗಳೆಂದರೆ ಅಸಮಂಜಸ ವ್ಯಾಮೋಹ

ಯಾವುದೇ ತಕ್ಕ ಕಾರಣವಿಲ್ಲದೆ ಅಳುವುದು ಅಥವಾ ನಗುವುದು

ಆಟಿಸಂ ಇರುವ ಮಕ್ಕಳು ಈ ಲಕ್ಷಣಗಳ ಮಿಶ್ರಣಗಳನ್ನು ಹಲವು ರೀತಿಗಳಲ್ಲಿ ತೋರಿಸಬಹುದು

ಶಬ್ದ ಅಥವಾ ಮಾತುಗಳಿಗೆ ಅಸಮಂಜಸ ಪ್ರತಿಕ್ರಿಯೆ (ಕೇಳಿಸುವುದಿಲವೇನೋ ಎಂಬ ರೀತಿ)

ಬೇರೆಯವರ ಜೊತೆ ಅಂತರಕ್ರಿಯೆ ಇಷ್ಟ ಪಡದಿರುವುದು, ಒಂಟಿಯಾಗಿರಲು ಇಷ್ಟಪಡುವುದು

ಪುನರಾವರ್ತಿತ ಚಲನೆಗಳು. ತನ್ನನ್ನು ಅಥವಾ ವಸ್ತುಗಳನ್ನು ತಿರುಗಿಸುವುದು/ಕೈಗಳನ್ನು ಬೀಸುವುದು/ದೇಹವನ್ನು ತೂಗುವುದು

ಅಪಾಯದ ಹೆದರಿಕೆ ಇಲ್ಲದಿರುವುದು

ನೋವಿನ ಸಂವೇದನೆಯ ಗ್ರಹಣಶೀಲತೆ ಇಲ್ಲದಿರುವುದು

ಮಾತನಾಡಲು ಕಷ್ಟಪಡುವುದು , ಸಂಜ್ಞೆ ಮಾಡುವುದು ಮತ್ತು ಬೇರೆಯವರು ಹೇಳಿದ್ದನ್ನು ಪುನರುಚ್ಚರಿಸುವುದು

## ೩.ಮಗುವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸೋಣ

ಒಂದು ಮಗುವಿಗೆ ಆಟಿಸಂ ಇದೆ ಎಂದು ತಿಳಿದುಕೊಳ್ಳುವುದು ಮಗುವಿನ ಒಂದು ಭಾಗವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ- ನಮಗೆ ಮಗು ಪ್ರದರ್ಶಿಸಬಹುದಾದ ಸ್ವಭಾವ ಮತ್ತು ವಿಶೇಷಗುಣಗಳು ತಿಳಿಯುತ್ತದೆ. ಈ ಸ್ಥಿತಿಯಿಂದಾಗಿ ಆಟಿಸಂ ಇರುವ ಮಗುವಿನ ಸಂವಹನ, ಅಂತರಕ್ರಿಯೆ ಮತ್ತು ವರ್ತನೆ ತರಗತಿಯ ಇತರ ಮಕ್ಕಳಿಗಿಂತಾ ಭಿನ್ನವಾಗಿರುತ್ತದೆ ಎಂದು ನಮಗೆ ತಿಳಿದಿರುತ್ತದೆ.

ಇದಷ್ಟೇ ಮಾಹಿತಿ ಸಾಕೇ? ನಾವು ಈ ಸ್ಥಿತಿಯ ಮೇಲಿನ ಪದರವನ್ನು ಮಾತ್ರ ಮುಟ್ಟಿದ್ದೇವೆಯೇ? ನಾವು ಈ 'ಆಟಿಸಂ' ಹಣೆಪಟ್ಟಿಯ ಕೆಳಗೂ ನೋಡಬೇಕಾಗಿದೆ. ಮಗು ಪ್ರರ್ದಶಿಸುತ್ತಿರುವ ವರ್ತನೆಯ ಲಕ್ಷಣಗಳು "ಏನು" ಎನ್ನುವುದರ ಮೇಲೆ ಲಕ್ಷ್ಯವಿಡುವ ಬದಲು ಇದು "ಏಕೆ" ಆಗುತ್ತಿದೆ ಎಂದು ಅರ್ಥಮಾಡಿಕೊಳ್ಳುವ ಅಗತ್ಯವಿದೆ. ಮಗು ಉದ್ದೇಶಪೂರ್ವಕವಾಗಿ ತನ್ನಮನಬಂದಂತೆ ನಡೆದುಕೊಳ್ಳಲು ಈ ರೀತಿ ವರ್ತಿಸುತ್ತಿದೆ ಎಂದು ತಪ್ಪಾಗಿ ಅರ್ಥೈಸಲಾಗುತ್ತದೆ. ಬಹಳಷ್ಟು ಬಾರಿ ವರ್ತನೆಗಳಿಗೆ ಪ್ರತಿಕ್ರಿಯೆ ನೀಡಿದರಷ್ಟೇ ಸಾಲದು, ಆ ವರ್ತನೆಗಳ ಕೆಳಗಿರುವ ಮೂಲಭೂತ ತೊಂದರೆಗಳನ್ನು ತಿಳಿಸುವ ತರ್ಕಬದ್ಧತೆಯನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾವ ನಿರ್ದಿಷ್ಟ ತೊಂದರೆಗಳನ್ನು ಮಗು ಎದುರಿಸುತ್ತದೆ ಎಂಬ ಮಾಹಿತಿ ದೊರಕಿದಾಗಷ್ಟೇ ನಾವು ಮಗುವಿನ ಅಗತ್ಯಗಳನ್ನು ಉದ್ದೇಶಿಸುವ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಬಹುದು.

- ಆಟಿಸಂ ಇರುವ ಮಗು ಯಾವ ತೊಂದರೆಗಳನ್ನು ಎದುರಿಸುತ್ತದೆ?
- ಮಗು ಈ ರೀತಿ ವರ್ತಿಸಲು ಅಥವಾ ಪ್ರತಿಕ್ರಿಯಿಸಲು ಅಥವಾ ಸಂವಹನ ನಡೆಸಲು ಏನು ಕಾರಣ?
- ಅವನ/ಳ ಸಾಮರ್ಥ್ಯಗಳೇನು?
- ಶಾಲೆಯಲ್ಲಿ ಆ ಮಗುವನ್ನು ಬೆಂಬಲಿಸಲು ನಾವು ಏನು ಮಾಡುವ ಅಗತ್ಯವಿದೆ?

## ೪.ಆಟಿಸಂ ಇರುವ ಮಕ್ಕಳು ಎದುರಿಸುವ ತೊಂದರೆಗಳು

ಕಳೆದ ಕೆಲವು ದಶಕಗಳಲ್ಲಿ ಆಟಿಸಂ ಬಗ್ಗೆ ಆಳವಾದ ಸಂಶೋಧನೆ ನಡೆದಿದೆ. ಸಂಶೋಧಕರು ಬಹಳಷ್ಟು ವ್ಯಾಖ್ಯಾನಗಳನ್ನು, ವಿವರಣೆಗಳನ್ನು ಹಾಗೂ ಚಿಕಿತ್ಸೆಗಳನ್ನು ಹೊರತಂದಿದ್ದಾರೆ. ಆದರೆ ಈ ಅಸ್ವಸ್ಥತೆಯ ಬಗ್ಗೆ ಜಿಜ್ಞಾಸೆಯ ಒಳನೋಟಗಳು ಆಟಿಸಂ ಇರುವ ವ್ಯಕ್ತಿಗಳಿಂದಲೇ ಬಂದಿವೆ. ಟೆಂಪಲ್ ಗ್ರಾಂಡಿನ್, ಡೋನಾ ವಿಲಿಯಮ್ಸ ಮತ್ತು ಸಿಯಾನ್ ಬರಾನ್ ಎಂಬುವರು ತಾವು ಬರೆದಿರುವ ಬಹಳಷ್ಟು ಪುಸ್ತಕಗಳಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ ಮತ್ತು ತಮ್ಮ ನಿರ್ಧಿಷ್ಟ ವರ್ತನೆಗಳಿಗೆ ವಿವರಣೆಯನ್ನು ನೀಡಿದ್ದಾರೆ.

- ಸಂವೇದನೆಗಳನ್ನು ಸಂಸ್ಕರಿಸುವುದರಲ್ಲಿ ತೊಂದರೆಗಳು
- ಭಾಷೆಯನ್ನು ಬಳಸುವ ಮತ್ತು ಅರ್ಥಮಾಡಿಕೊಳ್ಳುವುದರಲ್ಲಿನ ತೊಂದರೆಗಳು
- ಸಾಮಾಜಿಕ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವಲ್ಲಿನ ತೊಂದರೆಗಳು (ಜನರ ಜೊತೆ ಸಂಬಂಧ ಬೆಳೆಸುವುದು)
- ಕಲ್ಪನೆ ಮಾಡಿಕೊಳ್ಳುವುದು, ಆಲೋಚಿಸುವುದು ಮತ್ತು ಸಂಘಟನೆಯ ತೊಂದರೆಗಳು.

ನಾವು ಪ್ರತಿಯೊಂದು ವಿಷಯವನ್ನು ಅರ್ಥಮಾಡಿಕೊಳ್ಳೋಣ ಮತ್ತು ಇದು ಹೇಗೆ ಮಗುವಿನ ವರ್ತನೆಯಲ್ಲಿ ಪ್ರಕಟಗೊಳ್ಳುತ್ತದೆ ಎಂಬುದನ್ನು ವಿವರವಾಗಿ ತಿಳಿದುಕೊಳ್ಳೋಣ.

### ೪.೧ ಸಂವೇದನೆಗಳನ್ನು ಸಂಸ್ಕರಿಸುವುದರಲ್ಲಿ ತೊಂದರೆಗಳು

'ಸಂವೇದನಾ ಸಂಸ್ಕರಣೆ' ಎಂದರೆ ಇಂದ್ರಿಯಗಳಿಂದ ಮಾಹಿತಿ ಪಡೆದು (ನೋಡುವುದು, ಆಲಿಸುವುದು, ಸ್ಪರ್ಶಿಸುವುದು, ರುಚಿ ಮತ್ತು ಚಲನೆ) ಅವುಗಳನ್ನು ಸಂಘಟಿಸುವುದು ಮತ್ತು ಅರ್ಥಮಾಡಿಕೊಳ್ಳುವುದು ಹಾಗೂ ಅದಕ್ಕೆ ಅರ್ಥಪೂರ್ಣವಾಗಿ ಪ್ರತಿಕ್ರಿಯಿಸುವ ನಮ್ಮ ಸಾಮರ್ಥ್ಯ. ಕಾರಿನ ಹಾರ್ನ್ ಕೇಳಿದ ಕೂಡಲೇ ಏನು ಮಾಡಬೇಕೆಂದು ನಮಗೆ ಗೊತ್ತಿರುತ್ತದೆ. ಬಹಳಷ್ಟು ಜನರಿಗೆ ಇದು ತನ್ನಿಂದ ತಾನೇ ಆಗುವ (ಸ್ವಯಂ ಚಾಲಿತ) ಕ್ರಿಯೆಯಾಗಿದೆ. ಆದರೆ ಆಟಿಸಂನ ಬಹಳಷ್ಟು ಸ್ವ-ಅನುಭವ ಆಧಾರಿತ ವರದಿಗಳು ಸಂವೇದನಾ ಸಂಪರ್ಕದ ಒಂದು ಅಥವಾ ಹೆಚ್ಚಿನ ಗಮನಪಥಗಳಲ್ಲಿ 'ವಿಕೃತಿಗಳು ಮತ್ತು ಅಪಾರ್ಥ'ಗಳಿರುವುದನ್ನು ವಿವರಿಸುತ್ತವೆ. ತೊಂದರೆ ಇರುವುದು ಸಂವೇದನಾ ಗಮನಪಥಗಳಲ್ಲಿ ಅಲ್ಲ, ಬದಲಾಗಿ ಮೆದುಳು ಇಂದ್ರಿಯಗಳಿಂದ ಬಂದ ಮಾಹಿತಿಯನ್ನು ಸರಿಯಾಗಿ ಸಂಸ್ಕರಿಸದೇ ಇರುವುದರಲ್ಲಿ.

ಆಟಿಸಂ ಇರುವ ಹಲವರಲ್ಲಿ ಸಂವೇದನೆಗಳಿಗೆ ಅತಿ ಸೂಕ್ಷ್ಮತೆ (Hypersensitive) ಇರುತ್ತದೆ ಅವರು ಸಂವೇದನೆಗಳನ್ನು ಸುಲಭವಾಗಿ ಗ್ರಹಿಸುತ್ತಾರೆ. ತಮಗೆ ಬೇಡದಿರುವ ಸಂವೇದನೆಗಳನ್ನು ಅವರಿಗೆ ಪ್ರತ್ಯೇಕಿಸಲು ಬರುವುದಿಲ್ಲ. ಇದರಿಂದಾಗಿ ಅವರಿಗೆ ಸತತವಾಗಿ ಮಾಹಿತಿಯ ದಾಳಿಗೆ ತುತ್ತಾದ ಭಾವನೆ ಬರುತ್ತದೆ.

- ನನಗೆ ಎಲ್ಲಾ ಸಮಯದಲ್ಲೂ ಶಬ್ದಗಳು ಕೇಳುತ್ತಿರುತ್ತವೆ ಮತ್ತು ಅವು ನನಗೆ ಹುಚ್ಚು ಹಿಡಿಸುತ್ತವೆ - ಕುರ್ಚಿಗಳ ಜರುಗಾಟ, ಬಟ್ಟೆಗಳು, ಕೊಠಡಿಯಲ್ಲಿ ಗಾಳಿ ಚಲಿಸುತ್ತಿರುವ ಶಬ್ಧ.
- ನನ್ನ ಆಲಿಸುವಿಕೆ ಶ್ರವಣಸಾಧನದ ಶಬ್ಧ ನಿಯಂತ್ರಣ ಸ್ವಿಚ್ "ಅತಿ ಹೆಚ್ಚು" ಶ್ರೇಣಿಯಲೇ ಕಚ್ಚಿಕೊಂಡಿರುವಂತೆ ಇದೆ- ತೆರೆದಿರುವ ಮೈಕ್ರೋಫೋನ್ ಎಲ್ಲಾ ಶಬ್ಧಗಳನ್ನೂ ಗ್ರಹಿಸುವಂತೆ.
- ನನ್ನ ಬಳಿ ಎರಡು ಆಯ್ಕೆಗಳಿವೆ: ಮೈಕ್ ಆನ್ ಮಾಡಿ ಶಬ್ದಗಳ ಪ್ರವಾಹದಲ್ಲಿ ಕೊಚ್ಚಿಹೋಗುವುದು ಅಥವಾ ಕೇಳುವಿಕೆಯನ್ನು ಬಂದ್ ಮಾಡಿಕೊಳ್ಳುವುದು. ಕೆಲವೊಮ್ಮೆ ನಾನು ಕಿವುಡರಂತೆ ವರ್ತಿಸುತ್ತಿದ್ದೆ ಎಂದು ಅಮ್ಮ ಹೇಳುತ್ತಿದ್ದಳು.
- ನಾನು ವಸ್ತುಗಳ ಕಡೆಗೆ ನೇರವಾಗಿ ನೋಡಿದರೆ ನನ್ನ ಕಣ್ಣುಗಳು ನೋಯುತ್ತವೆ. ಆದ್ದರಿಂದ ನಾನು ಕಡೆಗಣ್ಣಿನಿಂದ ನೋಡುತ್ತೇವೆ.
- ಫ್ರೆಂಚ್ ಫ್ರೈಸ್ ನ ವಾಸನೆಯಿಂದ ನನಗೆ ತುಂಬಾ ತಲೆ ನೋವು, ಮತ್ತು ಕೆಲವು ವಾಸನೆಗಳಿಂದ ಹೊಟ್ಟೆನೋವು ಬರುತ್ತದೆ.
- ನಾನು ನೋಡಲು, ಮುಟ್ಟಲು ಅಥವಾ ನನಗೆ ಹಿತವಾಗಿ ಒಗ್ಗುತದೆ ಎನಿಸುವುದನ್ನು ತಿನ್ನುತ್ತಿದ್ದೆ. ಬಣ್ಣದ ಗ್ಲಾಸ್ ಜೆಲ್ಲಿ ಬಹಳ ಇಷ್ಟಪಡುತ್ತಿದ್ದೆ. ಜೆಲ್ಲಿ ಹಾಗೇ ಇರುತ್ತದೆ.
- ನಾನು ನನಗೆ ಹಿತವಾಗಿ, ಸಮಾಧಾನ ಕೊಡುವಂತಹ ಸಪ್ಪಗಿನ ಅಥವಾ ಹೆಚ್ಚು ಸಂಕೀರ್ಣವಲ್ಲದ ಆಹಾರ ತಿನ್ನಲು ಇಷ್ಟ ಪಡುತ್ತಿದೆ.. ಹೊಸದೇನ್ನನ್ನೂ ಪ್ರಯತ್ನಿಸಲು ಇಷ್ಟಪಡುತ್ತಿರಲಿಲ್ಲ. .
- ನನಗೆ ರಾತ್ರಿಯುಡುಗೆ ಇಷ್ಟವಿಲ್ಲ ಏಕೆಂದರೆ ನನ್ನ ಕಾಲುಗಳು ಒಂದಕ್ಕೊಂದು ತಗುಲುವ ಅನಿಸಿಕೆ ಅಹಿತಕರವಾಗಿರುತ್ತದೆ.
- ಅಪ್ಪಿಕೊಂಡಾಗಿನ ಒಳ್ಳೆಯ ಅನಿಸಿಕೆಯನ್ನು ನಾನೂ ಅನುಭವಿಸಲು ಬಯಸಿದ್ದೆ. ಆದರೆ ಜನರು ನನ್ನನ್ನು ತಬ್ಬಿಕೊಂಡಾಗ ಆ ಸಂವೇದನೆ ದೊಡ್ಡ ಅಲೆಯಂತೆ ನನ್ನ ಮೇಲೆ ಅಪ್ಪಳಿಸಿದಂತಾಗುತ್ತಿತ್ತು.

ಅತಿಸೂಕ್ಷ್ಮತೆ ಮಗುವಿನ ವರ್ತನೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತವೆ?

ಮಕ್ಕಳು ' ಓಡವುದು- ಇಲ್ಲವೇ ಹೋರಾಡುವುದರ' ಮೂಲಕ ಈ ಅಹಿತಕರ ಸಂವೇದನೆಗಳನ್ನು ತಪ್ಪಿಸಿಕೊಳ್ಳಲು ಅಥವಾ ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸಬಹುದು. ಆಕ್ರಮಣ ಶೀಲತೆಯನ್ನು ತೋರಿಸಬಹುದು ಅಥವಾ ತಮ್ಮ ಚಿಪ್ಪಿನೊಳಗೆ ಹುದುಗಿಕೊಳ್ಳಬಹುದು.. ಈ ಸಂವೇದನೆಗಳ ಹೊರೆಯನ್ನು ತಮ್ಮಿಂದ ನಿಭಾಯಿಸಲು ಕಷ್ಟವಾದಾಗ ಅದನ್ನು ತಪ್ಪಿಸಿಕೊಳ್ಳಲು ಕೆಲವು ಮಕ್ಕಳು ಅಸಾಮಾನ್ಯ ವರ್ತನೆಗಳನ್ನು ತೋರಬಹುದು.

- ಏಕಾಗ್ರತೆ ಅಥವಾ ಗಮನ ಹರಿಸಲು ಸಾಧ್ಯವಾಗದಿರುವುದು.
- ಶಬ್ದ ಅಥವಾ ಇತರ ಸಂವೇದನೆಗಳನ್ನು ತಡೆಯಲು ಆಗದಿದ್ದರೆ ಕೈಗಳನ್ನು ಬೀಸುವುದು ಅಥವಾ ಕಿವಿಗಳನ್ನು ಮುಚ್ಚಿಕೊಳ್ಳುವುದು. ಉದಾ: ಕೆಲವೊಮ್ಮೆ ಪಕ್ಕದಲ್ಲಿರುವ ಮಗು ಆಹಾರ ಜಗಿಯುವ ಶಬ್ಧ ಕೂಡಾ ಕ್ಷೋಭೆ ಉಂಟು ಮಾಡಬಹುದು.
- ಕಣ್ಣಲ್ಲಿ ಕಣ್ಣಿಟ್ಟು ನೋಡುವುದಕ್ಕೆ ಅವರೋಧ/ ತಪ್ಪಿಸುವುದು
- ಕೆಲವೇ ವಸ್ತುಗಳನ್ನು ತಿನ್ನುವುದು/ಕೆಲವು ವಸ್ತುಗಳನ್ನು ತಿನ್ನಲು ಸಾಧ್ಯವಾಗದಿರುವುದು
- ಹೊಸದಾದ/ಗೊತ್ತಿಲ್ಲದ/ಕೊಳೆಯಾದ ಯಾವುದೇ ವಸ್ತು/ವಿಷಯಗಳನ್ನು ಪ್ರಯತ್ನಿಸಲು ಅಥವಾ ಮುಟ್ಟಲು ಇಷ್ಟಪಡದಿರುವುದು.
- ಕೆಲವು ವಿನ್ಯಾಸಗಳನ್ನು ಮಾತ್ರ ಇಷ್ಟಪಡುವುದು.
- ಮುಟ್ಟಿದಾಗ/ಮುದ್ದಾಡಿದಾಗ ಆಕ್ರಮಣಕಾರಿಯಾಗಿ ಅಥವಾ ಹಿಂದೆಸರಿದು ಪ್ರತಿಕ್ರಯಿಸುವುದು.
- ಎಷ್ಟೇ ಚಳಿಯಿದ್ದರೂ ಬಟ್ಟೆ ಹಾಕಿಕೊಳ್ಳಲು ಇಷ್ಟಪಡದಿರುವುದು/ಅದೇ ಅಥವಾ ಒಂದೇ ರೀತಿಯ ಬಟ್ಟೆಗಳನ್ನು ಹಾಕಿಕೊಳ್ಳಲು ಹಠ ಮಾಡುವುದು.

ಆಟಿಸಂ ಇರುವ ಹಲವು ಮಕ್ಕಳು ಸಂವೇದನೆಗಳಿಗೆ ಮಂದ ಸೂಕ್ಷ್ಮತೆ (Hyposensitive) ಯನ್ನು ತೋರುತ್ತಾರೆ -ಅವರು ಮೆದುಳಿಗೆ ಬರುವ ಸಂವೇದನೆಗಳನ್ನು ಅನುಭವಿಸಲು ಕಷ್ಟ ಪಡುತ್ತಾರೆ. ಹೀಗಾಗಿ ತಮ್ಮನ್ನು ತಾವು ಪ್ರಚೋದನೆಗಳಿಗೆ ಒಳಪಡಿಸಿಕೊಳ್ಳುವ ಅಗತ್ಯ ಅವರಿಗೆ ಯಾವಾಗಲೂ ಇರುತ್ತದೆ.

- ನಾನು ಕಿವುಡನಂತೆ ತೋರುತ್ತಿದ್ದೆ (ನನ್ನ ಪೋಷಕರು ನನ್ನ ಬೆನ್ನ ಹಿಂದೆ ನಿಂತು ಇದ್ದಕ್ಕಿದ್ದಂತೆ ಜೋರಾದ ಸದ್ದು ಮಾಡಿದರೂ ನಾನು ಕಣ್ಣು ಮಿಟುಕಿಸುವ ಪ್ರತಿಕ್ರಿಯೆ ಕೂಡಾ ತೊರುತ್ತಿರಲಿಲ್ಲ.
- ನನ್ನ ಮಂಚದ ಬಳಿಯಿರುವ ಕಿಟಕಿಯಿಂದ ಬರುತ್ತಿರುವ ಹೊಳೆಯುವ ಬೆಳಕನ್ನು ನಾನು ನೋಡುತ್ತಿದ್ದೆ ಮತ್ತು ಕಣ್ಣುಗಳನ್ನು ಬಲವಾಗಿ ಉಜ್ಜುತ್ತಿದ್ದೆ- ಅವು ಅಲ್ಲೇ ಇರುತ್ತಿದ್ದವು- ಬಿಳಿಯ ಮಧ್ಯ ಚಲಿಸುತ್ತಿರುವ ತುಪ್ಪಳದಂತಿರುವ ಬಣ್ಣಗಳು.
- ನಾನು ಜನರನ್ನು ಅವರ ವಾಸನೆಯಿಂದ ನೆನಪಿಟ್ಟುಕೊಳ್ಳುತ್ತೇನೆ.
- ನಾನು ಹದಿಮೂರು ವರ್ಷದವನಾಗಿದ್ದರೂ ಕಸ, ಹೂವು, ಹುಲ್ಲು ಮತ್ತು ಪ್ಲಾಸ್ಟಿಕ್ಕನ್ನು ತಿನ್ನುತ್ತಿದ್ದೆ..

ಮಂದಸೂಕ್ಷ್ಮತೆ ಮಗುವಿನ ವರ್ತನೆಯ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆ?

ಮಕ್ಕಳು ನಿರಂತರವಾಗಿ ಸಂವೇದನೆಯ ಅನುಭವ ಮತ್ತು ಪ್ರಚೋದನೆಯನ್ನು ಹುಡುಕುತ್ತಿರಬಹುದು. ಪ್ರಚೋದನೆಗಳ ಅಭಾವವನ್ನು ನಿಭಾಯಿಸಲು ಅವರು ಕೆಲವು ಅಸಾಮಾನ್ಯ ವರ್ತನೆಗಳನ್ನು ತೋರಿಸಬಹುದು.

- ಅಪಾಯಕಾರಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಉದಾ:ಏನು ತಿನ್ನುತ್ತಿದ್ದೇನೆ ಎಂಬ ಪರಿವೆಯಿಲ್ಲದೆ ಒಂದೇ ಸಮನೆ ತಿನ್ನುವುದು, ಮರದ ಮೇಲೆ ಅತಿ ಎತ್ತರಕ್ಕೆ ಹತ್ತುವುದು ಇತ್ಯಾದಿ.
- ಅತಿ ದೊಡ್ಡ ಶಬ್ದಗಳು ಮತ್ತು ಧ್ವನಿಗಳನ್ನು ಇಷ್ಟಪಡುವುದು
- ನೋವು ಮಾಡಿಕೊಳ್ಳುವುದು ಮತ್ತು ಅದರ ಪರಿವೆ ಇಲ್ಲದಂತೆ ಇರುವುದು.
- ವಸ್ತುಗಳನ್ನು ನೋಡಲು, ಕೇಳಲು, ಮೂಸಲು, ಮುಟ್ಟಲು ಅತಿ ಹತ್ತಿರದಲ್ಲಿ ಹಿಡಿದುಕೊಳ್ಳುವುದು
- ತಾನೇ ಧ್ವನಿಗಳನ್ನು ಗುನುಗುನಿಸುವುದು ಅಥವಾ ಹೊರಡಿಸುತ್ತಿರುವುದು
- ಅತಿಚಟುವಟಿಕೆ- ನಿರಂತರವಾಗಿ, ತಿರುಗುವುದು, ಜೀಕುವುದು, ಹಿಂದೆ ಮುಂದೆ ಓಲಾಡುವುದು, ಕೈ ಬೀಸುವುದು, ಚಡಪಡಿಸಿವುದು ಮುಂತಾದ ಚಲನೆಯಲ್ಲಿರುವುದು. ಉದಾ:ತಮ್ಮ ಬೆರಳುಗಳನ್ನು ತಮ್ಮ ಕಣ್ಣಮುಂದೆ ಆಡಿಸುವುದನ್ನು ಇಷ್ಟ ಪಡುವುದು
- ಸ್ಪರ್ಶದ ಗಮನವಿಲ್ಲದಂತೆ ಇರುವುದು - ವಸ್ತುಗಳಿಗೆ ಡಿಕ್ಕಿ ಹೊಡೆಯುವುದು/ವಸ್ತುಗಳು ಮತ್ತು ಜನರನ್ನು ಪದೇ ಪದೇ ಜೋರಾಗಿ ಮುಟ್ಟುವುದು.
- ಪ್ರತಿ ವಸ್ತುವನ್ನು ನೆಕ್ಕಲು/ಮೂಸಲು/ಮುಟ್ಟಲು ಇಷ್ಟಪಡುವುದು
- ಬಹಳಷ್ಟು ಬಟ್ಟೆಗಳನ್ನು ಧರಿಸುವುದು ಮತ್ತು ಹೊರಗಿನ ತಾಪಮಾನದ ಅರಿವಿಲ್ಲದಂತೆ ಇರುವುದು

ಈ ಸಂವೇದನಾ ವಿಕೃತಿಗಳು ಕೆಲವು ಸಂದರ್ಭಗಳಲ್ಲಿ ಸುಸಂಬದ್ಧವಾಗಿಯೂ ಇರುವುದಿಲ್ಲ - ಅತೀ ಸೂಕ್ಷ್ಮತೆ ಮತ್ತು ಮಂದ ಸೂಕ್ಷ್ಮತೆಗಳ ನಡುವೆ ಬದಲಾಗುತ್ತಿರುತ್ತದೆ.

## ೪.೨ ಸಂವಹನ - ಬಾಷೆಯನ್ನು ಬಳಸುವುದು ಮತ್ತು ಅರ್ಥಮಾಡಿಕೊಳ್ಳುವುದು

ಆಟಿಸಂ ಇರುವ ಮಕ್ಕಳು ಇತರರೊಡನೆ ಸಂವಹನ ನಡೆಸಲು ಕಷ್ಟಪಡುತ್ತಾರೆ. ಬಹಳಷ್ಟು ಮಕ್ಕಳು ಪದಗಳ ಬದಲು ಚಿತ್ರಗಳ ಮೂಲಕ ಆಲೋಚಿಸುತ್ತಾರೆ ಆದ್ದರಿಂದ ಅವರು ಸಂದೇಶಗಳನ್ನು ಪದಗಳಲ್ಲದೇ ಚಿತ್ರಗಳ ಮೂಲಕ ಅರ್ಥ ಮಾಡಿಕೊಳ್ಳುತ್ತಾರೆ. ಜನರು ತಮ್ಮೊಡನೆ ಏನು ಹೇಳುತ್ತಿದ್ದಾರೆ ಎಂದು ಅರ್ಥಮಾಡಿಕೊಳ್ಳಲು ಅವರು ಶ್ರಮ ಪಡುತ್ತಾರೆ ಮತ್ತು ಭಾವನೆಗಳು ಮತ್ತು ಆಲೋಚನೆಗಳನ್ನು ವ್ಯಕ್ತ

ಪಡಿಸಲು ಕಷ್ಟಪಡುತ್ತಾರೆ. ಕೆಲವು ಮಕ್ಕಳು ತಮ್ಮ ಅಗತ್ಯಗಳನ್ನು ಕೇಳಬಹುದು ಆದರೆ ಭಾವನೆಗಳು ಮತ್ತು ಆಲೋಚನೆಗಳನ್ನು ವ್ಯಕ್ತ ಪಡಿಸಲು ಕಷ್ಟ ಪಡಬಹುದು. ಕೆಲವು ಮಕ್ಕಳು ಇತರರಿಗೆ ವಿಚಿತ್ರವೆನ್ನಿಸುವು ಸಂಕೇತಗಳು ಅಥವಾ ಹಾವಭಾವಗಳನ್ನು ತೋರಬಹುದು ಇವುಗಳು ಅವರ ಸಮೀಪವರ್ತಿ ಜನರಿಗೆ ಮಾತ್ರ ಅರ್ಥವಾಗುತ್ತದೆ. ಕೆಲವು ಮಕ್ಕಳು ಪದಗಳ ಕಡೆ ಆಕರ್ಷಿತರಾಗಿರಬಹುದು ಆದರೆ ಅವುಗಳನ್ನು ಸಂವಹನಕ್ಕೆ ಬಳಸಲು ಅವರಿಗೆ ಬರುವುದಿಲ್ಲ.

- ಆಟಿಸಂ ಇರುವ ಬಹಳಷ್ಟು ಮಕ್ಕಳು ಭಾಷೆಯನ್ನು ಅಕ್ಷರಶಃ ಅರ್ಥಮಾಡಿಕೊಳ್ಳುತ್ತಾರೆ. ಆದ್ದರಿಂದ ಅವರಿಗೆ ಹಾಸ್ಯ ಚಟಾಕಿಗಳು, ರೂಪಕಗಳು ಮತ್ತು ವ್ಯಂಗ್ಯ ಅರ್ಥವಾಗುವುದಿಲ್ಲ. ಉದಾಃ ಒಂದು ಬಣ್ಣ ಹಚ್ಚುವ ಪುಸ್ತಕವನ್ನು ಮಗುವಿಗೆ ಕೊಟ್ಟು "ಬಾ ನಾವು ಮನೆಗೆ ಬಣ್ಣ ಹಚ್ಚೋಣ"  ಎಂದು ಹೇಳಿದರೆ, ಅವನು ತನ್ನ ನಿಜವಾದ ಮನೆಗೆ ಬಣ್ಣ ಹಚ್ಚಬೇಕೆಂದು ತಿಳಿಯುತ್ತಾನೆ ಹೊರತು ಚಿತ್ರಕ್ಕಲ್ಲ.

- ಇದೇ ರೀತಿ ಆಟಿಸಂ ಇರುವ ಮಗುವು ಯಥಾವತ್ತಾಗಿ ವಿಷಯಗಳನ್ನು "ಹೇಳು"ತ್ತಾನೆ -ಅಂದರೆ ವಸ್ತುಗಳು ಹೇಗೆ ಇವೆಯೋ ಹಾಗೇ -ಅವನಿಗೆ ಬೇರೆಯವರು ಏನು ಭಾವಿಸಿಕೊಳ್ಳುತ್ತಾರೋ ಎಂಬ ಊಹೆ ಇರುವುದಿಲ್ಲ, ಎಷ್ಟು ಸೂಕ್ಷ್ಮವಿಲ್ಲದವನು ಇವನು ಎಂದು ಬೇರೆಯವರು ಭಾವಿಸುವ ರೀತಿಯಲ್ಲಿ ವರ್ತಿಸುತ್ತಾನೆ. ಉದಾಃಆ ಮಗು ತನ್ನ ಸ್ನೇಹಿತನ ಬಳಿಗೆ ಹೋಗಿ 'ನಿನ್ನ ಮೂಗು ತುಂಬಾ ದೊಡ್ಡದಾಗಿದೆ'  ಎಂದು ಹೇಳಿಬಿಡಬಹುದು.

- ಕೆಲವು ಮಕ್ಕಳಲ್ಲಿ ಬೇರೆಯವರು ಹೇಳಿದ್ದನ್ನು ಕೇಳಿ ಅದನ್ನು ಅಸಂಬದ್ಧ ಪುನರುಚ್ಚಾರಣೆ (Echolalia) ಮಾಡುವುದನ್ನು ನೋಡಬಹುದು ನೀವು ಅವರನ್ನು ನಿನಗೆ ಆಡಲು ಇಷ್ಟವಿದೆಯೇ? ಎಂದು ಕೇಳಿದರೆ, ಅವರು " ನಿನಗೆ ಕಥೆ ಕೇಳಲು ಇಷ್ಟವೇ? ಎಂದು ಸಹ ಹೇಳಬಹುದು. ಮಗುವಿಗೆ ಕಥೆ ಕೇಳಬೇಕೆಂದು ಇಷ್ಟವಿದ್ದರೆ ಪ್ರಶ್ನೆಯನ್ನು ಈ ರೀತಿ ದೃಢೀಕರಿಸಬಹುದು. ಆಸಂಬದ್ಧ ಪುನರುಚ್ಚಾರಣೆ ಒಂದು ಮಗುವಿನಲ್ಲಿದ್ದರೆ ಆ ಮಗು ಭಾಷೆಯನ್ನು ಮೇಲ್ಮೈ ಮಟ್ಟದಲ್ಲಿ ಸಂಸ್ಕರಿಸುತ್ತದೆ ಎಂದರ್ಥ.

- ಕೆಲವೊಮ್ಮೆ ಮಗು ಹೇಳಿದ್ದು ಪ್ರಸ್ತುತವೆನಿಸದೇ ಇರಬಹುದು - ಅದು ಸನ್ನಿವೇಶ ಅಥವಾ ಸಂದರ್ಭದಿಂದ ಪ್ರಚೋದಿತವಾಗಿರಬಹುದು. ಉದಾಃಮಗು ತಂದೆಯ ಬಳಿ ಹೋಗಿ 'ನಿನಗೆ ಜೋಕಾಲಿಯಾಡಲು ಇಷ್ಟವೇ?' ಎಂದು ಕೇಳಿದರೆ,

ಅವನು ಅಸಂಬದ್ಧ ಪುನರುಚ್ಚಾರಣೆಯನ್ನು ಬಳಸಿಕೊಂಡು ತನಗೆ ಜೋಕಾಲಿಯಾಡಲು ಇಷ್ಟ ಎಂದು ಹೇಳಲು ಪ್ರಯತ್ನಿಸುತ್ತಿದ್ದಾನೆ. ಮಗು ರೆಸ್ಟೋರೆಂಟ್ ಗೆ ಹೋದಾಗ 'ಎಲ್ಲರೂ ಜಾಗವನ್ನು ಹುಡುಕಿಕೊಂಡು ಕುಳಿತು ತಿನ್ನಲು ಪ್ರಾರಂಭಿಸಿ' ಎಂದು ಹೇಳಬಹುದು ಏಕೆಂದರೆ ಶಾಲೆಯಲ್ಲಿ ಊಟದ ಕೊಠಡಿಗೆ ಮಕ್ಕಳು ಹೋದಾಗ ಟೀಚರ್ ಇದನ್ನೇ ಹೇಳುತ್ತಾರೆ.

- ಕೆಲವು ಮಕ್ಕಳು ಪ್ರತ್ಯಯಗಳಿಗೆ ಬದಲಾಗಿ ಹೆಸರನ್ನು ಹೇಳಬಹುದು 'ನನಗೆ ನೀರು ಬೇಕು' ಎನ್ನುವ ಬದಲು 'ರೋಹಿತ್ ಗೆ ನೀರು ಬೇಕು' ಎಂದು ಹೇಳಬಹುದು.

- ಕೆಲವು ಮಕ್ಕಳಿಗೆ 'ನಾನು ಮತ್ತು ನೀನು' ಪದಗಳನ್ನು ಸೂಕ್ತವಾಗಿ ಬಳಸಲು ತೊಂದರೆ ಇರುತ್ತದೆ. ಸಿಹಿ ತಿಂಡಿ ಬಯಸುವ ಮಗು 'ನಿನಗೆ ಸಿಹಿ ತಿಂಡಿ ಬೇಕು' ಎನ್ನಬಹುದು.

## ೪.೩ ಸಾಮಾಜಿಕ ತಿಳುವಳಿಕೆ (ಜನರೊಡನೆ ಪರಸ್ಪರ ಸಂಬಂಧಗಳ ಬಗೆಗಿನ ತಿಳುವಳಿಕೆ)

ನಾವು ಜನರೊಡನೆ ಅಂತರಕ್ರಿಯೆ ನಡೆಸಲು ಅವರನ್ನು ಅರಿತುಕೊಳ್ಳಬೇಕಾದ ಅಗತ್ಯವಿರುತ್ತದೆ. ಅವರನ್ನು ಅರಿತುಕೊಳ್ಳಲು ನಾವು ಅವರ ಸಂವೇಗಗಳು, ಆಲೋಚನೆಗಳು, ಆಶಯಗಳು ಮತ್ತು ಇಂಗಿತಗಳನ್ನು ಊಹಿಸಿಕೊಂಡು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಈ ಅವಲೋಕನಗಳ ಆಧಾರದ ಮೇಲೆ ನಾವು ಮುಂದೆ ಅವರು ಏನು ಮಾಡಬಹುದು ಅಥವಾ ಆಲೋಚಿಸಬಹುದು ಎಂದು ಅಂದಾಜು ಮಾಡಬಹುದು. ಮೇಲೆ ಹೇಳಿದ ಎಲ್ಲಾ ವಿಷಯಗಳಲ್ಲಿ ಆಟಿಸಂ ಇರುವ ಮಕ್ಕಳಿಗೆ ತೊಂದರೆ ಇರುತ್ತದೆ.

- ಬೇರೆಯವರು ಏನು ಆಲೋಚಿಸುತ್ತಾರೆ ಅಥವಾ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂದು ನಿರೀಕ್ಷಿಸಲು ಅವರಿಗೆ ಸಾಧ್ಯವಾಗುವುದಿಲ್ಲ. ಉದಾ: ಅಸಂಬದ್ಧ ಪ್ರಶ್ನೆಗಳನ್ನು ಕೇಳುವುದು - ಚಿಕ್ಕಮ್ಮನನ್ನು 'ನೀವು ಏಕೆ ವಿಚಿತ್ರವಾಗಿ ಮಾತನಾಡುತ್ತೀರ' ಎಂದು, ತನಗೆ ಸೆಕೆಯಾಗುತ್ತಿದೆ ಎಂದು ಎಲ್ಲರೆದುರು ಬಟ್ಟೆಯನ್ನ ಬಿಚ್ಚುವುದು - ಇತ್ಯಾದಿ.
- ಕೆಲವೊಮ್ಮೆ ಮಕ್ಕಳು ಇತರರನ್ನು ಸಮೀಪಿಸಬಹದು - ಆದರೆ ಸ್ವಲ್ಪ ವಿಚಿತ್ರ ಅಥವಾ ಅನುಚಿತ ಎನ್ನುವ ರೀತಿಯಲ್ಲಿ - ಉದಾ: ಇನ್ನೊಬ್ಬರ ಬಳಿ ಬಹಳ ಹತ್ತಿರವಾಗಿ ಹೋಗುವುದು ಅಥವಾ ನಿಲ್ಲುವುದು

- ಅವರಿಗೆ ಎದುರಿಗೆ ಇರುವವರ ಇಂಗಿತಗಳು ಏನು ಎಂಬುದನ್ನು ನಿರೀಕ್ಷಿಸಲು ಕಷ್ಟವಾಗಬಹುದು. ಉದಾ- ವ್ಯಕ್ತಿಯ ಮುಖಭಾವ, ಧ್ವನಿಯನ್ನು ಅರ್ಥಮಾಡಿಕೊಳ್ಳದಿರುವುದು.
- ಕೆಲವು ಮಕ್ಕಳಿಗೆ ಇತರ ವ್ಯಕ್ತಿಗೆ ತಾನು ಹೇಳುತ್ತಿರುವುದಲ್ಲಿ ಆಸಕ್ತಿ ಇದೆಯೇ, ಇಲ್ಲ ಅರ್ಥವಾಗುತ್ತಿದೆಯೇ ಎಂದು ಊಹಿಸುವುದು ಕಷ್ಟ. ತಮಗೆ ಇಷ್ಟವಾದ ವಿಷಯದ ಬಗ್ಗೆ ಎದುರಿನವರಿಗೆ ಆಸಕ್ತಿಯಿಲ್ಲ ಅಥವಾ ಅವರಿಗೆ ಈಗಾಗಲೇ ಗೊತ್ತಿದೆ ಎಂದು ತಿಳಿಯದೇ ಒಂದೇ ಸಮನೆ ಮಾತನಾಡಬಹುದು.
- ಇತರರಲ್ಲಿನ ಭಾವನೆಗಳನ್ನು ಗುರುತಿಸಲು ಮತ್ತು ಅವುಗಳನ್ನು ಅರ್ಥ ಮಾಡಿಕೊಳ್ಳಲು ಈ ಮಕ್ಕಳು ಕಷ್ಟ ಪಡುತ್ತಾರೆ - ಎದುರಿನವರು ದುಃಖದಲ್ಲಿದ್ದಾರೆ ಅಥವಾ ಅವರಿಗೆ ನೋವಾಗಿದೆ ಎಂಬುದು ಅರ್ಥವಾಗದೇ ಇರಬಹುದು - ಯಾರಾದರೂ ಅಥವಾ ಯಾವ ವಸ್ತುವಾದರೂ ಬೀಳುವುದನ್ನು ನೋಡಿದರೆ ನಗಲು ಪ್ರಾರಂಭಿಸಬಹುದು.
- ಕೆಲವು ಮಕ್ಕಳಿಗೆ ಅಲಿಖಿತ ಸಾಮಾಜಿಕ ನಿಯಮಗಳ ಬಗ್ಗೆ ತಿಳುವಳಿಕೆ ಇರುವುದಿಲ್ಲ. ಉದಾಃ ಅಂಗಡಿಗೆ ಹೋಗಿ ದುಡ್ಡು ಕೊಡದೇ ವಸ್ತುಗಳನ್ನು ಎತ್ತಿಕೊಳ್ಳುವುದು, , ಇನ್ನೊಂದು ಮಗುವಿನ ಬಳಿಯಿರುವ ಚಾಕೋಲೇಟನ್ನು ಕೇಳದೆ ತೆಗೆದುಕೊಳ್ಳುವುದು, ಜೋಕಾಲಿ ಆಡಬೇಕೆಂದ್ದಿದರೆ ಕುಳಿತಿರುವ ಮಗುವನ್ನು ದೂಡಿ ತಾನು ಕುಳಿತುಕೊಳ್ಳುವುದು, ಇನ್ನೊಬ್ಬರ ಬಟ್ಟೆ ಅಥವಾ ಕೂದಲನ್ನು ಮುಟ್ಟುವುದು.

ಈ ತೊಂದರೆಗಳಿಂದ ಮಗುವನ್ನು ಒರಟ ಅಥವಾ ಸೂಕ್ಷ್ಮತೆಯಿಲ್ಲದ್ದು ಎಂದು ತಪ್ಪಾಗಿ ಅರ್ಥೈಸಿಕೊಳ್ಳಲಾಗುತ್ತದೆ.

## ೪.೪ ಕಲ್ಪನೆ ಮಾಡಿಕೊಳ್ಳುವುದು, ಆಲೋಚನೆ ಮತ್ತು ಮಾಹಿತಿ ಸಂಘಟಿಸಿಕೊಳ್ಳುವುದರಲ್ಲಿ ತೊಂದರೆಗಳು

ಕಲ್ಪನಾತ್ಮಕವಾಗಿ ಆಟಿಕೆಗಳು ಮತ್ತು ಜನರ ಜೊತೆ ಆಟವಾಡುವ ಸಾಮರ್ಥ್ಯವು ಆಟಿಸಂ ಇರುವ ಮಕ್ಕಳಲ್ಲಿ ಸೀಮಿತವಾಗಿರುತ್ತದೆ. ಇದರ ಪರಿಣಾಮವಾಗಿ, ಅವರಲ್ಲಿ ಸೀಮಿತ ವ್ಯಾಪ್ತಿಯ ಕಾಲ್ಪನಿಕ ಚಟುವಟಿಕೆಗಳು ಇರುತ್ತವೆ. - ಅವುಗಳಲ್ಲಿ ಬಹಳಷ್ಟು ಟೆಲಿವಿಷನ್ ನಲ್ಲಿ ನೋಡಿದ ಚಟುವಟಿಕೆಗಳ ಅನುಕರಣೆಗಳಾಗಿರುತ್ತವೆ. ಹಲವು ಚಟುವಟಿಕೆಗಳನ್ನು ಪುನರಾವರ್ತಿತವಾಗಿ ಮಾಡುತ್ತಿರುತ್ತಾರೆ. ಹಲವು ಚಟುವಟಿಕೆಗಳು ಸಂಕೀರ್ಣವೆನಿಸಿದರೂ ಗಮನವಿಟ್ಟು ನೋಡಿದಾಗ, ಅವು ಸಾಕಷ್ಟು ಪುನರಾವರ್ತಿತ ಮತ್ತು ಒಂದೇ ರೀತಿಯ (ಮುದ್ರಾಂಕಿತ) ಚಟುವಟಿಕೆಗಳಾಗಿರುತ್ತವೆ.

- ಆಟಿಸಂ ಇರುವ ಮಕ್ಕಳು ಒಂದು ವಸ್ತು ಅಥವಾ ಆಟಿಕೆಯನ್ನು ಇಡಿಯಾಗಿ ನೋಡುವ ಬದಲು, ಅವುಗಳ ನಿರ್ದಿಷ್ಟ ವಿವರಗಳ ಮೇಲೆ ಗಮನ ಕೇಂದ್ರೀಕರಿಸುತ್ತಾರೆ. ಉದಾ: ಕಾರಿನ ಚಕ್ರಗಳ ಕಡೆಯಷ್ಟೇ ಗಮನ ಕೊಡುವುದು ಅಥವಾ ಉಪಕರಣಗಳ ಮೈನ್ ಸ್ವಿಚ್ ಗಳ ಕಡೆಗೇ ಗಮನ ಕೊಡುವುದು
- ಪ್ರಾಸಂಗಿಕ ಕಲಿಕೆಯಲ್ಲಿ ತೊಂದರೆ - ಆದ್ದರಿಂದ ಸಂಕಲ್ಪನೆಗಳನ್ನು ನೇರವಾಗಿ ಹೇಳಿಕೊಡಬೇಕಾಗುತ್ತದೆ.
- ಸಾಮಾನ್ಯೀಕರಣದಲ್ಲಿ ತೊಂದರೆ -ಆದ್ದರಿಂದ ಪ್ರತಿಯೊಂದು ಘಟನೆಯೂ ಬಿನ್ನವಾಗಿರುವಂತೆ ತೋರುತ್ತದೆ, ಮಗುವಿನ ಕಲ್ಪನೆಯಿಂದ ಸೀಮಿತ ಮಾಹಿತಿ ದೊರಕುವುದರಿಂದ ಈ ರೀತಿ ಆಗಬಹುದು.
- ಕೆಲವು ಮಕ್ಕಳು ಬಹಳ ಕೇಂದ್ರೀಕೃತ ಮತ್ತು ಸಂಕುಚಿತ ವ್ಯಾಪ್ತಿಯ ಆಸಕ್ತಿಗಳು ಮತ್ತು ಚಟುವಟಿಕೆಗಳನ್ನು ಹೊಂದಿರುತ್ತಾರೆ. ಉದಾ:ಒಂದು ನಿರ್ದಿಷ್ಟ ಕಾರ್ಯಕ್ರಮವನ್ನೇ ನೋಡುವುದು, ಒಂದು ನಿರ್ದಿಷ್ಟ ಪುಸ್ತಕವನ್ನೇ ಓದುವುದು.
- ಅವರಿಗೆ ಕೆಲವು ನಿರ್ದಿಷ್ಠ ವಸ್ತುಗಳ ಬಗ್ಗೆ ಅತಿಯಾದ ಮೋಹ ಇರಬಹುದು, ವಸ್ತುಗಳನ್ನು ಸಾಲಾಗಿ ಜೋಡಿಸುವುದು ಅಥವಾ ಶೂಲೇಸನ್ನು ನಿರ್ದಿಷ್ಟವಾಗಿ ವಿನ್ಯಾಸಗಳಲ್ಲಿ ಕಟ್ಟಿಕೊಳ್ಳುವುದರಲ್ಲಿ ತೀವ್ರ ಅನುರಕ್ತಿ ತೋರಿಸುವುದು, ಕೆಲವು ನಿರ್ದಿಷ್ಟ ವಿಷಯಗಳ ಬಗ್ಗೆ ಅಂದರೆ ಹಕ್ಕಿಗಳು ಅಥವಾ ಡೈನೋಸಾರಸ್ ಗಳು ಅಥವಾ ಟ್ರೈನ್ ಎಂಜಿನ್ ಗಳು ಮತ್ತು ವೇಳಾಪಟ್ಟಿಗಳು, ಕೆಲವು ವಿಧದ ವಸ್ತುಗಳ ಸಂಗ್ರಹಣೆ ಮುಂತಾದವುಗಳ ಬಗ್ಗೆ ಅತಿಯಾದ ಆಸಕ್ತಿ ತೋರಿಸುವುದು.
- ಕಲ್ಪನೆಯ ಕೊರತೆಯಿರುವುದರಿಂದ, ಬದಲಾವಣೆಗಳಿಗೆ ಬಿಗಿತ ಮತ್ತು ವಿರೋಧಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಉದಾ:ಅದೇ ದಾರಿಯಲ್ಲಿ ಕರೆದೊಯ್ಯುವಂತೆ ಹಠ ಮಾಡುವುದು, ಹಲ್ಲನ್ನು ನಿರ್ದಿಷ್ಟ ರೀತಿಯಲ್ಲೇ ಉಜ್ಜುವುದು, ಮಲಗುವ ಮೊದಲು ಮಾಡಲುವ ಒಂದೇ ರೀತಿಯ ಆಚರಣೆಗಳು. ಈ ದಿನಚರಿಯಲ್ಲಿ ಯಾವುದೇ ಬದಲಾವಣೆಯಾದರೂ ಈ ಮಕ್ಕಳಿಗೆ ಬಹಳ ಗೊಂದಲವುಂಟಾಗಬಹುದು.

## ೫. 'ಆಟಿಸಂ' ಅನ್ನು ಗುಣಪಡಿಸಬಹುದೇ?

ಈ ಸಮಯದಲ್ಲಿ ನಮಗೆ 'ಆಟಿಸಂ' ಉಂಟಾಗಲು ನಿಜವಾದ ಕಾರಣಗಳೇನು ಎಂದು ತಿಳಿಯದಿರುವುದರಿಂದ ಅದನ್ನು 'ಗುಣ'ಪಡಿಸಲು ಸಾಧ್ಯವಿಲ್ಲ. ಈಗ ಆಟಿಸಂ ಅನ್ನು ಗುಣಪಡಿಸಲು ಯಾವುದೇ ತಿಳಿದ ಚಿಕಿತ್ಸೆ ಲಭ್ಯವಿಲ್ಲದಿದ್ದರೂ, ಚಿಕಿತ್ಸೆಗಳು ವ್ಯಕ್ತಿ ತನ್ನ ಗರಿಷ್ಟ ಸಾಮರ್ಥ್ಯದ ಕಡೆಗೆ ಪ್ರಗತಿ ಹೊಂದಲು ಮತ್ತು ಈ ಸ್ಥಿತಿಯೊಂದಿಗೆ ಸೇರಿಕೊಂಡಿರುವ ಸವಾಲುಗಳನ್ನು ಕಡಿಮೆಮಾಡಲು ಸಹಾಯ ಮಾಡಬಹುದು.

ಆಟಿಸಂ ಹೊಂದಿರುವ ವ್ಯಕ್ತಿಗಳ ಮೇಲೆ ಪ್ರಯತ್ನಿಸಿದ ಹಲವಾರು ಚಿಕಿತ್ಸಾ ಆಯ್ಕೆಗಳಿದ್ದರೂ ಅವುಗಳಲ್ಲಿ ಇದೇ ಚಿಕಿತ್ಸೆ ಅತ್ಯುತ್ತಮ ಅಥವಾ ಪರಿಣಾಮಕಾರಿ ಎಂದು ಎಲ್ಲೂ ಸಾಬೀತಾಗಿಲ್ಲ. ಈ ಚಿಕಿತ್ಸಾ ಆಯ್ಕೆಗಳು ಕೆಳಗಿನಂತಿವೆ.

- ಮನೋಸಾಮಾಜಿಕ/ ವರ್ತನಾ ಅನುಸಂಧಾನಗಳು.
- ಆಹಾರಕ್ರಮದ (ಪಥ್ಯ) ಮಧ್ಯಸ್ಥಿಕೆಗಳು
- ಔಷಧದ ಮಧ್ಯಸ್ಥಿಕೆಗಳು
- ವಾಕ್ ಚಿಕಿತ್ಸೆ
- ಔದ್ಯೋಗಿಕ ಚಿಕಿತ್ಸೆ

ಆದರೆ ಹೇಗೆ ಒಂದು ಗುಣ ಅಥವಾ ವರ್ತನೆಯ ಜೊತೆ ಆಟಿಸಂ ಇರುವ ವ್ಯಕ್ತಿಯನ್ನು ಗುರುತಿಸಲಾಗುವುದಿಲ್ಲವೋ ಅದೇ ರೀತಿ ಯಾವುದೇ ಒಂದು ಚಿಕಿತ್ಸೆಯು ಆಟಿಸಂ ಇರುವ ಎಲ್ಲರಿಗೂ ಪರಿಣಾಮಕಾರಿಯಾಗಿರುವುದಿಲ್ಲ. ಮೇಲೆ ಹೇಳಿದ ಚಿಕಿತ್ಸೆಗಳ ಸಂಯೋಜನೆಯು ಪರಿಣಾಮಕಾರಿಯಾಗಬಹುದು.

ಆಟಿಸಂನ ಚಿಕಿತ್ಸೆಯು ಉತ್ತಮ ಶಿಕ್ಷಣ ಮತ್ತು ಪೋಷಕರ ತರಬೇತಿಯೂ ಸೇರಿದ ಒಂದು ಸಂರಚಿತ ತರಬೇತಿ ಕಾರ್ಯಕ್ರಮವನ್ನು ಒಳಗೊಂಡಿರುತ್ತದೆ. ಆಟಿಸಂ ಹೊಂದಿರುವ ಮಕ್ಕಳು ಹೊಸ ಕೌಶಲ್ಯಗಳನ್ನು ಕಲಿತು, ಪರಿಣಿತಿ ಹೊಂದಿ ಸ್ವಾಂತತ್ರ್ಯದ ಕಡೆಗೆ ನಡೆಯುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಮಧ್ಯಸ್ಥಿಕೆಯು ಸೂಕ್ತ ಮತ್ತು ಸುಸಂಬದ್ಧವಾಗಿದ್ದರೆ ಅವರು ಗಮನಾರ್ಹ ಪ್ರಗತಿಯನ್ನು ತೋರಿಸುತ್ತಾರೆ. ಆಟಿಸಂ ಇರುವ ಮಕ್ಕಳಿಗೆ ಸಾಧ್ಯವಾದಷ್ಟು ಬೇಗನೆ ಪರಿಣಾಮಕಾರಿಯಾದ ಸೇವೆಗಳು, ಚಿಕಿತ್ಸೆಗಳು ಮತ್ತು ಶಿಕ್ಷಣವನ್ನು ಕಂಡು ಕೊಳ್ಳುವುದು ಬಹಳ ಮುಖ್ಯವಾಗುತ್ತದೆ.

ಈ ಮಕ್ಕಳು ಆದಷ್ಟೂ ಬೇಗನೆ ಸೂಕ್ತ ಚಿಕಿತ್ಸೆ ಪಡೆಯುವುದು ಉತ್ತಮ.

## ೬. ಆಟಿಸಂ ಇರುವ ಮಕ್ಕಳು ವ್ಯವಸ್ಥಿತ/ಸಾಮಾನ್ಯ ಶಾಲೆಗೆ ಹೋಗಬಹುದೇ? ಹಾಗಿದ್ದರೆ ಅವರ ಪಠ್ಯಕ್ರಮ ಹೇಗಿರಬೇಕು?

ಹೌದು- ಇದು ಸಾಧ್ಯವಿದೆ. ಭಾರತದಲ್ಲಿ ಹಲವು ಸಾಮಾನ್ಯ ಶಾಲೆಗಳು ಆಟಿಸಂ ಇರುವ ಮಕ್ಕಳನ್ನು ಸೇರಿಸಿಕೊಂಡಿದ್ದಾರೆ. ಇತರ ಮಕ್ಕಳಿಗೆ ಅನುಸರಿಸುವ ಪಠ್ಯಕ್ರಮವನ್ನೇ ಇವರಿಗೂ ಅನುಸರಿಸಿರಬಹುದು ಆದರೆ ಅವರ ಅಗತ್ಯಗಳಿಗೆ ತಕ್ಕ ಹಾಗೇ ಸ್ವಲ್ಪ ಮಟ್ಟಿಗಿನ ನಮ್ಯತೆ ಮತ್ತು

ರೂಪಾಂತರಗಳನ್ನು ಮಾಡಿಕೊಳ್ಳಬೇಕಾಗಬಹುದು. ಉದಾ:ಎರಡು ಭಾಷೆಗಳ ಬದಲಾಗಿ ಒಂದು ಬಾಷೆಯ ಕಲಿಕೆ, ಪೇಪರ ಪೆನ್ಸಿಲ್ ಬದಲಾಗಿ ಉತ್ತರಗಳನ್ನು ಕಂಪ್ಯೂಟರ್ ನಲ್ಲಿ ಟೈಪ್ ಮಾಡುವುದು - ಇದು ಪ್ರತ್ಯೇಕ ಮಗುವಿನ ಮೇಲೆ ಅವಲಂಬಿತವಾಗಿರುತ್ತದೆ. ಕೆಲವು ನಿರ್ದಿಷ್ಟ ಬೋಧನಾ ತಂತ್ರಗಳು ಮತ್ತು ವಿಧಾನಗಳು ಈ ಮಕ್ಕಳಿಗೆ ಲಾಭಕರವಾಗಿರಬಹುದು. ಇದೆಲ್ಲವೂ ಮತ್ತೆ ಪ್ರತ್ಯೇಕ ಮಗುವಿನ ಸಾಮರ್ಥ್ಯಗಳು ಮತ್ತು ಅಗತ್ಯಗಳ ಮೇಲೆ ಅವಲಂಬಿತವಾಗಿರುತ್ತವೆ. ತರಗತಿ ಮತ್ತು ಶಾಲೆಯಲ್ಲಿನ ಭೌತಿಕ ಮರು-ರಚನೆಗಳೂ ಸಹ ಈ ಮಕ್ಕಳಿಗೆ ಸಹಾಯಕವಾಗಬಹುದು.

ಸೂಕ್ತ ತಂತ್ರಗಳನ್ನು ಬಳಸಿದಾಗ ಒಳಗೊಳ್ಳುವಿಕೆ ಸಾಧ್ಯವಾಗುತ್ತದೆ.

## ೭. ಮಗುವನ್ನು ಸೇರಿಸಿಕೊಳ್ಳುವ ಮೊದಲು ಒಂದು ಶಾಲೆಯು ಏನಾದರೂ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆ? ಸಿಬ್ಬಂದಿಗಳಿಗೆ ಯಾವುದಾದರೂ ತರಬೇತಿಯ ಅಗತ್ಯವಿದೆಯೇ?

ಶಾಲೆಯ ಆಡಳಿತವು ಶಾಲೆಯ ಎಲ್ಲಾ ಸಿಬ್ಬಂದಿ (ಸಹಾಯಕ ಸಿಬ್ಬಂದಿಯನ್ನೊಳಗೊಂಡಂತೆ), ಇತರ ಮಕ್ಕಳು ಮತ್ತು ಅವರ ಪೋಷಕರೊಡನೆ ಮಾಹಿತಿಯನ್ನು ಹಂಚಿಕೊಂಡಿರುವುದನ್ನು ಹಾಗೂ ಸಿದ್ದರಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇದಕ್ಕಾಗಿ ತೆಗೆದುಕೊಳ್ಳಬೇಕಾದ ಕೆಲವು ಕ್ರಮಗಳು ಹೀಗಿವೆ:

- ಸೂಕ್ಷ್ಮ - ಸಂವೇದನೀಕರಣ (Sensitization)-ಸಾಮಾನ್ಯ ಶಾಲೆಗಳಲ್ಲಿರುವ ಅಸಾಮರ್ಥ್ಯವುಳ್ಳ ಮಕ್ಕಳನ್ನು ಕುರಿತ ಅಭಿವೃತ್ತಿಗಳು, ನಂಬಿಕೆಗಳು, ಆತಂಕಗಳು ಮತ್ತು ಕಾಳಜಿಗಳನ್ನು ಉದ್ದೇಶಿಸಿರಬೇಕು. ಸಿಬ್ಬಂದಿ, ಮಕ್ಕಳು ಮತ್ತು ಪೋಷಕರಿಗೆ ಪ್ರತ್ಯೇಕ ಅಧಿವೇಶನಗಳನ್ನು ಮಾಡಬಹುದು. ಜನರಿಗೆ ಇರಬಹುದಾದ ತಪ್ಪು ಕಲ್ಪನೆಗಳು ಮತ್ತು ಅಭಿಪ್ರಾಯಗಳನ್ನು ಚರ್ಚೆಗಳ ಮೂಲಕ ಬಗೆಹರಿಸಬಹುದು. ಸೂಕ್ಷ್ಮ-ಸಂವೇದನೀಕರಣಕ್ಕೆ ಬೇಕಾದ ಕೆಲವು ವಿಚಾರಗಳು ಮತ್ತು ಆಟಗಳನ್ನು ಈ ಕೈಪಿಡಿಯ ಕೊನೆಯ ಅಧ್ಯಾಯದಲ್ಲಿ ಕೊಡಲಾಗಿದೆ.
- ಮಾಹಿತಿ: ಆಟಿಸಂ ಬಗ್ಗೆ ಮಾಹಿತಿಯನ್ನು ನೀಡಿ. ಅವರು ಏನನ್ನು ನಿರೀಕ್ಷಿಸಬಹುದು ಎಂಬುದರ ಬಗ್ಗೆ ಮಾಹಿತಿಯನ್ನು ಹಂಚಿಕೊಳ್ಳಿ. ಆಟಿಸಂ ಇರುವ ಮಕ್ಕಳು ಇತರ ಮಕ್ಕಳಿಗಿಂತ ಭಿನ್ನ ರೀತಿಯಲ್ಲಿ ವರ್ತಿಸುವುದಕ್ಕೆ ಮತ್ತು ಪ್ರತಿಕ್ರಿಯಿಸುವುದಕ್ಕೆ ಹಿಂದಿರುವ ಕಾರಣವನ್ನು ಅವರು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿ, ಹಾಗೂ ಅವು ಬೇಕೆಂದೇ ಮಾಡುವ ಅಥವಾ ಮನಸ್ಸಿಗೆ ಬಂದದ್ದನ್ನು ಮಾಡುವ ವರ್ತನೆಗಳಲ್ಲ ಎಂಬ ವಾಸ್ತವವನ್ನು ಮನದಟ್ಟು ಮಾಡಿ.

- ಸಿಬ್ಬಂದಿ ತರಬೇತಿ - ಅ) ಹೇಗೆ ಪ್ರತಿಯೊಂದು ಮಗುವಿನ ಸಾಮರ್ಥ್ಯ ಮತ್ತು ಅಗತ್ಯಗಳನ್ನು ತಿಳಿಯುವುದು. ಆ) ತರಗತಿಯಲ್ಲಿ ಮಗುವನ್ನು ಬೆಂಬಲಿಸಲು ಅಗತ್ಯವಾದ ತಂತ್ರಗಳು ಮತ್ತು ವಿಧಾನಗಳನ್ನು ಹೇಗೆ ಬಳಸುವುದು.
- ಸಿದ್ಧತೆ/ ಮರುಸಂರಚನೆ: ಸುರಕ್ಷಿತ ಹಾಗೂ ಬೆಂಬಲಿಸುವ ಶಾಲೆಯ ಪರಿಸರಕ್ಕಾಗಿ ಸಿದ್ದತೆ/ಮರು-ರಚನೆ ಇದು ಭೌತಿಕ ಹಾಗೂ ಸಾಮಾಜಿಕ -ಸಂವೇಗಾತ್ಮಕ ಪರಿಸರವನ್ನು ಒಳಗೊಂಡಿರಬಹುದು.
- ಸುಸಂಗತೆ: ಎಲ್ಲಾ ಸಿಬ್ಬಂದಿ ಸದಸ್ಯರ ನಿರೀಕ್ಷೆಗಳು ಮತ್ತು ತಂತ್ರಗಳಲ್ಲಿ ಸುಸಂಗತೆಯು ನಿರ್ಣಾಯಕವಾಗಿರುತ್ತದೆ.

## ೮.ಮಗುವಿಗೆ ತಕ್ಕ ಪರಿಸರ ಹಾಗೂ ಬೋಧನಾ ತಂತ್ರಗಳನ್ನು ಒದಗಿಸಲು ಅನುಕೂಲವಾಗುವಂತೆ ಶಾಲೆಯು ಬೆಂಬಲ ಮತ್ತು ತರಬೇತಿ ಪಡೆಯಬಹುದೇ? ನಿಭಾಯಿಸಲು ತೊಂದರೆಯಾದರೆ ಶಾಲೆಗೆ ಯಾರು ಸಹಾಯ ಮಾಡುತ್ತಾರೆ?

ಆಟಿಸಂ ಇರುವ ಮಗುವಿಗೆ ಬೆಂಬಲ ಒದಗಿಸುವುದು ಒಂದು ತಂಡದ ಪ್ರಯತ್ನವಾಗುತ್ತದೆ. ಒಬ್ಬ ವ್ಯಕ್ತಿ ಅಥವಾ ಶಾಲೆಯೊಂದೇ ಮಾಡಲು ಸಾಧ್ಯವಿಲ್ಲ. ತಂಡವು ಸಾಮಾನ್ಯವಾಗಿ ಮಗು, ಅವನ ಕುಟುಂಬದವರು ಮತ್ತು ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವೃತ್ತಿಪರರು ಹಾಗೂ ಶಾಲೆಯ ಸಿಬ್ಬಂದಿಯನ್ನು ಒಳಗೊಂಡಿರುತ್ತದೆ. ಮಾರ್ಗದರ್ಶನ ಮತ್ತು ಬೆಂಬಲಗಳಿಗಾಗಿ ಶಾಲೆಯು ಆಟಿಸಂ ಇರುವ ವ್ಯಕ್ತಿಗಳ ಜೊತೆ ಕೆಲಸ ಮಾಡುತ್ತಿರುವ ಸಂಘಗಳನ್ನು ಸಂಪರ್ಕಿಸಬಹುದು. ಈ ಸಂಘಟನೆಗಳು ಪ್ರತಿ ಮಗುವಿನ ಅಗತ್ಯ ಮತ್ತು ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು, ಮಾಹಿತಿ ಒದಗಿಸಬಹದು, ತರಬೇತಿಗಳನ್ನು ಯೋಜಿಸಬಹುದು, ವಿಧಾನಗಳು ಮತ್ತು ತಂತ್ರಗಳನ್ನು ಸೂಚಿಸಬಹುದು.

ಇಂತಹ ಸಂಸ್ಥೆಗಳ ಪಟ್ಟಿಯನ್ನು ಈ ಕೈ ಪಿಡಿಯ ಕೊನೆಯಲ್ಲಿ ನೀಡಲಾಗಿದೆ.

## ೯. ನನಗೆ ಆಟಿಸಂ ಕುರಿತಾದ ಮತ್ತು ಅದಕ್ಕೆ ಸಂಬಂಧಿಸಿದ ತೊಂದರೆಗಳ ಬಗ್ಗೆ ಸ್ವಲ್ಪ ಮಾಹಿತಿ ಇದೆ. ತರಗತಿಯ ಶಿಕ್ಷಕರಾಗಿ ನಾನು ಏನು ಮಾಡುವ ಅಗತ್ಯ ಇದೆ?

ಸಂಬಂಧಪಟ್ಟ ವ್ಯಕ್ತಿಗಳು ಚೆನ್ನಾಗಿ ತಿಳಿದಿದ್ದರೆ, ಸಾಕಷ್ಟು ಬೆಂಬಲ ಒದಗಿಸಿದ್ದರೆ, ಸೂಕ್ತ ಬೋಧನಾ ವಿಧಾನಗಳು ಅನುಷ್ಠಾನಗೊಂಡಿದ್ದರೆ, ಆಟಿಸಂ ಇರುವ ವಿದ್ಯಾರ್ಥಿಗಳು, ಸಾಮಾನ್ಯ ಶಿಕ್ಷಣದ ಸನ್ನಿವೇಶದಲ್ಲಿ ಕಲಿಯಬಹುದು.

1. ಹಿಂದೆ ತಿಳಿಸಿದಂತೆ, ಈ ಸ್ಥಿತಿಯ ಬಗ್ಗೆ ಮಾಹಿತಿಯನ್ನು ಪಡೆಯುವುದು ಮೊದಲು ಹೆಜ್ಜೆಯಾಗಿದೆ-ಶಾಲಾ ಆಡಳಿತವು ಏರ್ಪಡಿಸಿದ ತರಬೇತಿಯ ಅವಧಿಗಳಲ್ಲಿ ನಿಮ್ಮ ಎಲ್ಲಾ ಪ್ರಶ್ನೆಗಳು ಮತ್ತು ಕಾಳಜಿಗಳನ್ನು ಪರಿಹರಿಸಿಕೊಳ್ಳುವುದನ್ನು ಖಚಿತ ಮಾಡಿಕೊಳ್ಳಿರಿ.
2. ಮಗುವನ್ನು ಅರ್ಥಮಾಡಿಕೊಳ್ಳಿ-ಮಗುವಿನಲ್ಲಿರುವ ಕೊರತೆಗಳು ಮತ್ತು ಅಗತ್ಯಗಳನ್ನಲ್ಲದೇ ಮಗುವಿನ ಸಾಮರ್ಥ್ಯಗಳು ಮತ್ತು ಆಸಕ್ತಿಯ ಕ್ಷೇತ್ರಗಳ ಬಗ್ಗೆಯೂ ತಿಳಿಯಿರಿ. *ಇದನ್ನು ಒಂದು ತಂಡದಂತೆ ಮಾಡಿರಿ.* - ಮಗುವಿನ ಕುಟುಂಬದವರು ಮತ್ತು ನಿಮ್ಮ ಜೊತೆ ಅಥವಾ ನಿಮ್ಮನ್ನು ಬೆಂಬಲಿಸುತ್ತಿರುವ ಸಂಸ್ಥೆಯ ಸದಸ್ಯರನ್ನು ಸೇರಿಸಿಕೊಳ್ಳಿ. ಕೆಳಗಿನಂತೆ ಮಾಹಿತಿಯನ್ನು ಪಟ್ಟಿ ಮಾಡಿ.

   ಅ. ಸಾಮರ್ಥ್ಯಗಳು ಮತ್ತು ಆಸಕ್ತಿಗಳು

   ಆ.ಭಯ ಹುಟ್ಟಿಸುವ, ಹತಾಶೆಗೊಳಿಸುವ, ಒತ್ತಡ ಉಂಟು ಮಾಡುವ ಸನ್ನಿವೇಶಗಳು

   ಇ. ಸವಾಲುಗಳು ಅಥವಾ ಕೆಲಸ ಮಾಡಬೇಕಿರುವ ಕ್ಷೇತ್ರಗಳು

   ಈ.ಕಲಿಕೆಯ ಶೈಲಿಯ ಆದ್ಯತೆಗಳು

3. ಒಂದು ಸಲ ತಂಡವು ಮಗುವನ್ನು ತಿಳಿದುಕೊಂಡ ಮೇಲೆ ಗುರಿಗಳು ಮತ್ತು ಫಲಿತಾಂಶಗಳನ್ನು ತಯಾರಿ ಮಾಡಿಕೊಳ್ಳುವುದು ಮುಂದಿನ ಹೆಜ್ಜೆಯಾಗುತ್ತದೆ. ಅವಧಿಯ/ಶೈಕ್ಷಣಿಕ ವರ್ಷದ ಕೊನೆಯ ಹೊತ್ತಿಗೆ ಮಗು ಏನನ್ನು ಕಲಿಯಬೇಕೆಂದು ನೀವು ನಿರೀಕ್ಷಿಸುತ್ತಿರೋ ಅವುಗಳೇ "ಫಲಿತಾಂಶಗಳು".
4. ಫಲಿತಾಂಶಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಿದ ಮೇಲೆ ಆ ಪಲಿತಾಂಶಗಳನ್ನು ಸಾಧಿಸಲು ತಂಡವು ಏನು ಮಾಡಬೇಕೆನ್ನುವುದು ಮುಂದಿನ ಹೆಜ್ಜೆಯಾಗುತ್ತದೆ.

   *(ಮಗುವಿನ ಸಾಮರ್ಥ್ಯಗಳು, ಆಸಕ್ತಿಗಳು, ಆಗತ್ಯಗಳು ಮತ್ತು ಕಲಿಕೆಯ ಶೈಲಿಯನ್ನು ಗಮನದಲ್ಲಿಟ್ಟುಕೊಂಡು)*

   ಅ. ಬೆಂಬಲಿಸುವ ಪರಿಸರವನ್ನು ಒದಗಿಸುವುದು (ಭೌತಿಕ, ಸಾಮಾಜಿಕ -ಸಂವೇಗಾತ್ಮಕ ಮತ್ತು ಕಲಿಕಾ ವಾತಾವರಣ)

   ಆ.ಸೂಕ್ತ ಚಟುವಟಿಕೆಗಳನ್ನು ಸಂಘಟಿಸುವುದು

   ಇ.ನಿರ್ದಿಷ್ಟ ಬೋಧನಾ ತಂತ್ರಗಳು / ವಿಧಾನಗಳನ್ನು ಬಳಸುವುದು

   *ನೆನಪಿಡಿ : ಇದು ಶೈಕ್ಷಣಿಕ ಮತ್ತು ಶಿಕ್ಷಣೇತರ ಗುರಿಗಳ ಸಂಯೋಜನೆಯಾಗಿರುತ್ತದೆ.*

## ೧೦. ಬೆಂಬಲಿಸುವ ಪರಿಸರವನ್ನು ನೀಡಲು ನಾವು ಏನು ಮಾಡುತ್ತೇವೆ?

ಶಾಲೆಯ ಪರಿಸರವು ಸಂಕೀರ್ಣವಾಗಿರುತ್ತದೆ ಎಂಬುದು ನಮಗೆಲ್ಲಾ ತಿಳಿದಿರುವ ವಿಷಯವಾಗಿದೆ-ಇದರಲ್ಲಿ ನಿರಂತರ ಚಟುವಟಿಕೆಯಿರುತ್ತದೆ, ಹಲವು ಅನಿರೀಕ್ಷಿತ ಘಟನೆಗಳು ದಿನವೆಲ್ಲಾ ನಡೆಯುತ್ತಿರುತ್ತವೆ.

ಎಲ್ಲಾ ವಿದ್ಯಾರ್ಥಿಗಳು- ಆಟಿಸಂ ಇರುವವರು ಅಥವಾ ಇಲ್ಲದಿರುವವರೂ - ಬೇರೆ ಬೇರೆ ವಿಷಯಗಳು, ವಿಭಿನ್ನ ಶಿಕ್ಷಕರು, ವೇಳಾಪಟ್ಟಿಯಲ್ಲಿ ಬದಲಾವಣೆ, ಪಠ್ಯೇತರ ಚಟುವಟಿಕೆಗಳು, ಸಹಪಾಠಿಗಳ ಒತ್ತಡ - ಎಲ್ಲವನ್ನೂ ನಿಭಾಯಿಸಬೇಕಾಗುತ್ತದೆ.

ಬಹಳಷ್ಟು ವಿದ್ಯಾರ್ಥಿಗಳು- ಆಟಿಸಂ ಇರುವವರು, ಇಲ್ಲದವರೂ ಶಾಲೆಯಲ್ಲಿ ಕಷ್ಟಗಳನ್ನು ಎದುರಿಸುತ್ತಾರೆ


- ಏಕಾಗ್ರತೆಯಿಂದಿರುವುದು ಮತ್ತು ಗಮನಕೊಟ್ಟು ಕೆಲಸವನ್ನು ಮಾಡುವುದು
- ಒಂದು ದೊಡ್ಡ ಗುಂಪಿನಲ್ಲಿ ಸೂಚನೆಗಳನ್ನು ಪಾಲಿಸುವುದು
- ಸಂವಹನ ನಡೆಸಲು ಸಾಧ್ಯವಾಗದಿರುವುದು
- ಸ್ನೇಹಿತರನ್ನು ಮಾಡಿಕೊಳ್ಳಲು ಸಾಧ್ಯವಾಗದಿರುವುದು
- ತರಗತಿಯಲ್ಲಿ ಭಾಗವಹಿಸುವುದು
- ಸಂಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು
- ದಬಾದುಬಿಗೆ/ ಪರಿಹಾಸ್ಯಕ್ಕೆ ಒಳಗಾಗುವುದು
- ವರ್ತನೆಯ ತೊಂದರೆಗಳು
- ಪರಿವರ್ತನೆಗಳನ್ನು ನಿಭಾಯಿಸಲು ಕಷ್ಟಪಡುವುದು

ಈ ತೊಂದರೆಗಳಿಗೆ ಕಾರಣಗಳು ವಿಭಿನ್ನವಾಗಿರಬಹುದು -ಉದಾ: ಒಂದು ಮಗುವಿಗೆ ನಾಚಿಕೆ ಸ್ವಭಾವದಿಂದಾಗಿ ಸಂವಹನ ನಡೆಸಲು ಸಾಧ್ಯವಾಗದಿರಬಹುದು, ಆದರೆ ಇನ್ನೊಂದು ಮಗುವಿಗೆ ಮಾತನಾಡುವುದರಲ್ಲಿ ಸಮಸ್ಯೆಯಿರಬಹುದು. ಆದರೆ ತೊಂದರೆಗಳು ಒಂದೇ ರೀತಿಯಾಗಿವೆ. ಸಂರಚಿತ ಪರಿಸರ ಹೇಗೆ ಸಹಾಯ ಮಾಡುತ್ತದೆ?

## ೧೧. ಸಂರಚಿತ ಪರಿಸರ ಎಂದರೇನು?

ಒಂದು ಸಂರಚಿತ ಪರಿಸರ ಎಲ್ಲ ಮಕ್ಕಳ ಸಾಮರ್ಥ್ಯಗಳು ಮತ್ತು ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡ ಮಾಡಿದ ಒಂದು ಆರಾಮದಾಯಕ ಸುರಕ್ಷಿತ, ಊಹಿಸಬಹುದಾದ, ಸಂಘಟಿತ ಪರಿಸರವಾಗಿದೆ. ಒಂದು ಸಂರಚಿತ ಪರಿಸರವನ್ನು ಒದಗಿಸಲು ನೀವು ನಿಮ್ಮ ತರಗತಿಯ

ವ್ಯವಸ್ಥೆ, ದಿನಚರಿಗಳು ಮತ್ತು ನಿರೀಕ್ಷೆಗಳಲ್ಲಿ ಅಗತ್ಯವಿರುವ ರೂಪಾಂತರಗಳನ್ನು ಮಾಡಿಕೊಳ್ಳಲು ಸಿದ್ಧರಿರಬೇಕು. ಇವು ತರಗತಿಯ ಎಲ್ಲ ವಿದ್ಯಾರ್ಥಿಗಳ ಸಾಮರ್ಥ್ಯಗಳು ಮತ್ತು ಅಗತ್ಯಗಳಿಗೆ ಅವಕಾಶ ಕಲ್ಪಿಸಿಕೊಡುವಂತಿರಬೇಕು




## ೧೧.೧. ಭೌತಿಕ ಪರಿಸರ

ಭೌತಿಕ ಪರಿಸರವೆಂದರೆ ಶಾಲೆಯ ವಿವಿಧ ಸ್ಥಳಗಳಲ್ಲಿ ಯಾವ ವಸ್ತುಗಳನ್ನು ಇಡಲಾಗಿದೆ ಮತ್ತು ಅವುಗಳನ್ನು ಹೇಗೆ ಜೋಡಿಸಲಾಗಿದೆ ಎನ್ನುವುದು. ಇದು ಅಸಾಮರ್ಥ್ಯ ಉಳ್ಳವರಿಗೆ ಅನುಕೂಲಕರವಾಗಿ ಇದೆಯೇ ಎನ್ನುವುದಲ್ಲದೆ ಖಾತ್ರಿ ಮಾಡಿಕೊಳ್ಳಬೇಕಾದ ಅಗತ್ಯವಿರುವ ಇತರ ವಿಷಯಗಳು :

- ಎಲ್ಲಾ ಸ್ಥಳಗಳು ಸ್ಪಷ್ಟವಾಗಿ ನಿರ್ಧಾರಿತವಾಗಿ ಮತ್ತು ಸೀಮಿತವಾಗಿರುತ್ತವೆ. ಉದಾ.
  - ಪೀಠೋಪಕರಣಗಳನ್ನು ಸೂಕ್ತಸ್ಥಳಗಳಲ್ಲಿ ಇರಿಸುವುದು
  - ಲೇಬಲ್ ಗಳು ಮತ್ತು ನೆಲಕ್ಕೆ ಅಂಟಿಸಿದ ಟೇಪ್ ಗಳಿಂದ ಕಣ್ಣಿಗೆ ಕಾಣವಂತೆ ಸೀಮಾರೇಖೆ (ನಿರ್ಮಿಸುವುದು)
  - ಮಗುವಿನ ಸ್ವಂತ ವಸ್ತುಗಳನ್ನು ಬಣ್ಣದ ಸೂಚಕಗಳಿಂದ ಗುರುತಿಸುವುದು.

- ಮಕ್ಕಳ ಗಮನಕ್ಕೆ ಭಂಗ ತರುವ ಶಬ್ದ ಮತ್ತು ದೃಶ್ಯಗಳನ್ನು ಕಡಿಮೆ ಮಾಡಿ ಶಾಂತ ಪರಿಸರವನ್ನು ಸೃಷ್ಟಿಸುವುದು.

  - ಸುತ್ತಲ ಪರಿಸರಕ್ಕೆ ತಿಳಿ ಅಥವಾ ಸ್ವಾಭಾವಿಕ ಬಣ್ಣವನ್ನು ಹಚ್ಚುವುದರ ಮೂಲಕ (ಗೋಡೆಗಳು, ಕಪಾಟುಗಳು, ಬಟ್ಟೆಯ ನೋಟೀಸ್ ಬೋರ್ಡ್)
  - ತರಗತಿಯ ವಸ್ತುಗಳನ್ನು ಕಪಾಟಿನಲ್ಲಿ ಇರಿಸುವ ಮೂಲಕ ತರಗತಿಯಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಸ್ತವ್ಯಸ್ತತೆಯನ್ನು ಕಡಿಮೆ ಮಾಡುವುದರ ಮೂಲಕ (ಚಾರ್ಟುಗಳು, ಕಲಾ ಸಾಮಗ್ರಿಗಳು ಮತ್ತು ಅಲಂಕಾರಿಕ ವಸ್ತುಗಳು)
  - ಉಪಯೋಗಿಸದೇ ಇದ್ದ ಉಪಕರಣಗಳ ಮೇಲೆ ಹೊದಿಕೆ ಅಥವಾ ಪರದೆಗಳನ್ನು ಹಾಕುವ ಮೂಲಕ (ಕಂಪ್ಯೂಟರ್, ಪುಸ್ತಕಗಳ ಶೆಲ್ಫ್)
  - ಜರುಗಿಸುವಾಗ ಕಿರುಗುಟ್ಟುವ ಪೀಠೋಪಕರಣಗಳನ್ನು ಉಪಯೋಗಿಸುವುದನ್ನು ತಪ್ಪಿಸುವುದು.
  - ಕೋಣೆಯ ಒಳಗೆ ಬರುವ ಬೆಳಕು ಮತ್ತು ಚುಚ್ಚುವ ಪ್ರಕಾಶವನ್ನು (ಝಳಪು) ನಿಯಂತ್ರಿಸಲು ಪರದೆಗಳು ಮತ್ತು ಕಡ್ಡಿಯ ತೆರೆಗಳನ್ನು ಬಳಸುವುದು.
  - ಕೆಲವು ಮಕ್ಕಳಿಗೆ ವೈಯಕ್ತಿಕ ಅಧ್ಯಯನ ಸ್ಥಳ ಬೇಕಾಗುತ್ತದೆ.

- ಸಂವೇದನಾ ಸಂಸ್ಕರಣೆಯ ತೊಂದರೆ ಇರುವ ಮಕ್ಕಳ ಅಗತ್ಯಗಳಿಗೆ ಸಂವೇದನಾ ಶೀಲತೆಯಿಂದಿರಿ.

  ಅನೇಕ ಮಕ್ಕಳಿಗೆ ಗಮನವನ್ನು ಕೊಡಲು ಮತ್ತು ಕೇಂದ್ರೀಕರಿಸಲು ತೊಂದರೆಗಳಿರುತ್ತವೆ. ಅವರೆಲ್ಲರಿಗೂ ಸಂವೇದನಾ ಸಂಸ್ಕರಣೆಯಲ್ಲಿ ತೊಂದರೆಗಳಿವೆ ಎಂದು ಅರ್ಥವಲ್ಲ. ನಮಗೆಲ್ಲರಿಗೂ ವಿಭಿನ್ನವಾದ ಕಲಿಕೆಯ ಶೈಲಿಗಳು, ಸಾಮರ್ಥ್ಯಗಳು ಮತ್ತು ಮಿತಿಗಳಿರುತ್ತವೆ. ನಮ್ಮಲ್ಲಿ ಕೆಲವರಿಗೆ ಪೂರ್ತಿಯಾಗಿ ನಿಶ್ಯಬ್ದವಾಗಿದ್ದರೆ ಮಾತ್ರ ಏಕಾಗ್ರತೆ ಇರುತ್ತದೆ, ಇನ್ನೂ ಕೆಲವರು ಅಬ್ಬರದ ಸಂಗೀತ ಕೇಳಿಸಿಕೊಂಡು ಅಭ್ಯಾಸ ಮಾಡುತ್ತಾರೆ. ಕೆಲವರಿಗೆ ಕರಕುಶಲ ಕೆಲಸಗಳು ಇಷ್ಟವಾಗುತ್ತವೆ (ಬಣ್ಣ ಹಚ್ಚುವುದು, ಜೇಡಿ ಮಣ್ಣು, ಕುಂಬಾರಿಕೆ) ಇನ್ನೂ ಕೆಲವರಿಗೆ ತಮ್ಮ ಕೈ ಕೊಳೆಯಾದರೆ ತಡೆದುಕೊಳ್ಳಲು ಆಗುವುದಿಲ್ಲ. ಸಂವೇದನೆಯ ಸಂಸ್ಕರಣೆಯಲ್ಲಿ ತೊಂದರೆ ಇರುವ ಮಗುವಿನಲ್ಲಿ ಈ ತೊಂದರೆಗಳು ವಿಭಿನ್ನ ರೀತಿಯಲ್ಲಿ ಕಾಣಿಸಬಹುದು. ತೊಂದರೆ ಇದೆ ಎಂಬ ಸಂಶಯ ಬಂದರೆ, ಪೋಷಕರು ಮತ್ತು ಶಾಲೆಯ ತಂಡದ ಸಲಹೆ ತೆಗೆದುಕೊಳ್ಳಿ.

  - ಯಾವುದು ಅವರನ್ನು ಉತ್ಸಾಹವಾಗಿರುವಂತೆ ಅಥವಾ ಶಾಂತವಾಗುವಂತೆ ಅಥವಾ ಹೆದರಿಸುವಂತೆ ಮಾಡುತ್ತದೆ ಎಂಬುದನ್ನು ಗಮನಿಸಿ/ತಿಳಿದುಕೊಳ್ಳಿ.

- ಈ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಪರಿಸರದಲ್ಲಿ ರೂಪಾಂತರಗಳನ್ನು ಸಂಘಟಿಸಿ.

  ಕೆಲವು ಉದಾಹರಣೆಗಳು:

- ಒಂದು ಮಗುವಿಗೆ ಶಬ್ದಕ್ಕೆ ಅತಿಸೂಕ್ಷ್ಮತೆ ಇದ್ದರೆ, ಆ ಮಗುವಿಗೆ ಹೆಚ್ಚು ಶಬ್ದವಿರುವ ಸಮಯಗಳಲ್ಲಿ ಉದಾಹರಣೆಗೆ ಒಂದು ತರಗತಿಯಿಂದ ಇನ್ನೊಂದು ತರಗತಿಗೆ ಹೋಗಬೇಕಾದರೆ ಹೆಡ್ ಫೋನ್ ಅನ್ನು ಒದಗಿಸಿ.
- ಒಂದು ಮಗುವಿಗೆ ಶ್ರವಣ ಪ್ರಚೋದನೆಯ ಅಗತ್ಯವಿದ್ದರೆ (auditory stimulation)-ವಾಕ್ ಮನ್ ಅನ್ನು ಒದಗಿಸಿ.
- ಒಂದು ಮಗುವಿಗೆ ಸ್ಪರ್ಶಕ್ಕೆ ಅತೀ ಸೂಕ್ಷ್ಮತೆ ಇದ್ದರೆ ಸಾಲಿನಲ್ಲಿ ಅವನಿಗೆ ಮತ್ತು ಅವನ ಮುಂದಿರುವ ಮಗುವಿಗೆ ಸಾಕಷ್ಟು ಸ್ಥಳಾವಕಾಶವನ್ನು ಒದಗಿಸಿ. ಜೇಡಿಮಣ್ಣು ಉಪಯೋಗಿಸುವ ತರಗತಿ, ವಿಜ್ಞಾನದ ಪ್ರಯೋಗಾಲಯದಲ್ಲಿ ವಸ್ತುಗಳನ್ನು ಮುಟ್ಟುವಂತಹ ಮಗುವಿನ ಮೇಲೆ ಒತ್ತಡ ತರಬಹುದಾದ ಸನ್ನಿವೇಶಗಳಿಂದ ದೂರವಿಡಿ..

## ೧೧.೨ ಸಾಮಾಜಿಕ- ಸಂವೇಗಾತ್ಮಕ ಪರಿಸರ

ನಾವು ಮಗುವಿಗೆ ತನ್ನ ತೊಂದರೆಗಳನ್ನು ಮೀರಿ ಹೊಸ ಕೌಶಲ್ಯಗಳನ್ನು ಕಲಿಯಬಲ್ಲಂತ ನೆಮ್ಮದಿಯ ಮತ್ತು ಪ್ರೋತ್ಸಾಹದಾಯಕ ಪರಿಸರವನ್ನು ಒದಗಿಸಬೇಕು.

➢ ತರಗತಿಯ ಇತರ ಮಕ್ಕಳನ್ನು ಸಂವೇದನಾಶೀಲರನ್ನಾಗಿ ಮಾಡುವುದು/ಸಿದ್ಧರನ್ನಾಗಿಸುವುದು

  - ಈ ಸ್ಥಿತಿಯ ಬಗ್ಗೆ ಮಾಹಿತಿಯನ್ನು ಒದಗಿಸುವುದು: ಆಟಿಸಂ ಇರುವ ಮಕ್ಕಳು ಇತರ ಮಕ್ಕಳಿಗಿಂತ ಭಿನ್ನವಾಗಿ ಏಕೆ ಪ್ರತಿಕ್ರಯಿಸುತ್ತಾರೆ ಮತ್ತು ವರ್ತಿಸುತ್ತಾರೆ ಎಂಬುದರ ಕಾರಣಗಳನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ಸಹಾಯ ಮಾಡಿ- ವಾಸ್ತವವಾಗಿ ಈ ವರ್ತನೆಯು ಮನಸ್ಸಿಗೆ ಬಂದದ್ದನ್ನು ಮಾಡುವುದು ಅಥವಾ ಬೇಕೆಂದು ಮಾಡುವುದಲ್ಲ ಎಂಬುದನ್ನು ತಿಳಿಹೇಳಿ.

  *ನೀವು ಎಚ್ಚರಿಕೆಯಿಂದ ಆಲೋಚಿಸಿದರೆ, ತರಗತಿಯ ಅನೇಕ ಮಕ್ಕಳಿಗೆ ಒಂದಲ್ಲ ಒಂದು ರೀತಿಯ ಅಗತ್ಯವಿರುತ್ತದೆ. ನಾವು ಕೇವಲ 'ಆಟಿಸಂ' ಒಂದರ ಬಗ್ಗೆಯೇ ಮಾತನಾಡದೆ ಮಕ್ಕಳಿಗೆ ಇರುವ ವಿವಿಧ ಅಗತ್ಯಗಳ ಬಗ್ಗೆ, ಒಂದು ಸಾಮಾನ್ಯ ಚರ್ಚೆ ನಡೆಸಬಹುದು - ಈ ಅಗತ್ಯಗಳು ಬೇರೆ ಬೇರೆ ವೈದ್ಯಕೀಯ,*

*ಅಸಾಮರ್ಥ್ಯತೆಯ, ಆರ್ಥಿಕ, ಸಾಮಾಜಿಕ ಅಥವಾ ಸಂವೇಗಾತ್ಮಕ ಪರಿಸ್ಥಿತಿಗಳಿಂದ ಉಂಟಾಗಿರಬಹುದು.*

- ಅವರ ಪ್ರಯತ್ನಗಳಿಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಮಕ್ಕಳಿಗೆ ಯಶಸ್ವಿಯಾಗಲು ಅವಕಾಶಗಳನ್ನು ಕೊಡುವುದು
  - ಮಕ್ಕಳು ಸರಿಯಾಗಿ ಮಾಡುತ್ತಿರುವುದನ್ನು ಗಮನಿಸಿ - ಅವರು ಪ್ರಯತ್ನ ಪಡುತ್ತಿರುವುದನ್ನು ನೋಡಿದಾಗ ಮೆಚ್ಚುಗೆ ತೋರಿಸಿ.
  - ನೀವು ಮಕ್ಕಳಿಗೆ ಅವರಿಗೆ ಅರ್ಥಪೂರ್ಣವಾದಂತಹ ಪುರಸ್ಕಾರಗಳನ್ನು ನೀಡುತ್ತಿದ್ದರೆ, ಅವರು ತಮ್ಮ ಪ್ರಯತ್ನಗಳನ್ನು ಹೆಚ್ಚಿಸುವ ಸಂಭವವೂ ಹೆಚ್ಚುತ್ತದೆ.
  - ಮಕ್ಕಳಲ್ಲಿ ಸಾಧನೆಯ ಭಾವನೆಯನ್ನು ಹುಟ್ಟಿಸಿ ಅವರನ್ನು ಪ್ರೋತ್ಸಾಹಿಸಿ. ಗಣಿತ, ಸಂಗೀತ, ಚಿತ್ರಕಲೆ ಮುಂತಾದ ಕ್ಷೇತ್ರಗಳಲ್ಲಿ ತಮಗಿರುವ ಸಾಮರ್ಥ್ಯವನ್ನು  ಬಳಸಲು ಅವಕಾಶಗಳನ್ನು ನೀಡುವ ಮೂಲಕ ನೀವು ಇದನ್ನು ಮಾಡಬಹುದು.
- ನೆಮ್ಮದಿಯ  ಮತ್ತು ಊಹಿಸಬಹುದಾದ ಪರಿಸರವನ್ನು ಒದಗಿಸಿ.
  - ದಿನಚರಿಯಲ್ಲೇನ್ನಾದರೂ ಬದಲಾವಣೆ ಇದ್ದರೆ ಆಟಿಸಂ ಇರುವ ಮಕ್ಕಳು ಬಹಳ ಆತಂಕಕ್ಕೆ ಒಳಗಾಗುತ್ತಾರೆ. ಮಗುವಿಗೆ ಬದಲಾವಣೆಯನ್ನು ನಿಭಾಯಿಸಲು ಸಹಾಯ ಮಾಡಿ - ತೊಂದರೆ ಉಂಟುಮಾಡಬಹುದಾದ ಬದಲಾವಣೆಯ ಮುನ್ಸೂಚನೆಯನ್ನು ನೀಡಿ. ಮಾತಿನ ಮೂಲಕ ಹೇಳುವುದರ ಬದಲು ದೃಶ್ಯ ಮಾಧ್ಯಮ (ರೇಖಾಚಿತ್ರ,  ಚಾರ್ಟ್) ದ ಮೂಲಕ ಹೇಳುವುದು ಹೆಚ್ಚು ಪರಿಣಾಮ ಕಾರಿಯಾಗಿರುತ್ತದೆ. ಉದಾಃ ವೇಳಾಪಟ್ಟಿ, ಶಿಕ್ಷಕರು ಅಥವಾ ತರಗತಿಯಲ್ಲಿ ಬದಲಾವಣೆ.
- ಸಂವೇಗಾತ್ಮಕ ವಿಕಾಸವನ್ನು ಹೆಚ್ಚಿಸಿ
  - ಶಿಕ್ಷಕರಾಗಿ ನಿಮಗೆ ಮಗುವಿನ ಹಾವಭಾವ ಅಥವಾ ವರ್ತನೆಯಲ್ಲಿ ಗಮನಾರ್ಹ ಬದಲಾವಣೆಯು ಆತಂಕದ ಸಂಕೇತ ಎಂದು ಗುರುತಿಸುವ ಅಗತ್ಯವಿದೆ. ವರ್ತನೆಯೊಂದಕ್ಕೇ  ಪ್ರತ್ಯೇಕವಾಗಿ ಪ್ರತಿಕ್ರಯಿಸುವ ಬದಲು, ಆ ವರ್ತನೆಯ ಹಿಂದಿನ ಕಾರಣ ಮತ್ತು ಉದ್ಧೇಶವನ್ನು  ಅರ್ಥಮಾಡಿಕೊಳ್ಳಬೇಕಾಗುತ್ತದೆ.
  - ಮಗುವನ್ನು ಯಾವುದು ತಳಮಳಗೊಳಿಸುತ್ತದೆ ಎಂದು ಗಮನಿಸಿ - ಯಾವುದಾದರೂ ನಿರ್ದಿಷ್ಟ ವಿಷಯ ಅಥವಾ ಸನ್ನಿವೇಶವು ಒದರಾಟವನ್ನು ಪ್ರಚೋದಿಸುತ್ತದೆ ಎಂಬುದು ತಿಳಿದಿದ್ದರೆ ಆ ಸನ್ನಿವೇಶವನ್ನು ತಪ್ಪಿಸಿ.

- ತನ್ನ ಕೋಪವನ್ನು ಸಂಭಾಳಿಸುವುದನ್ನು ಮಗುವಿಗೆ ಹೇಳಿಕೊಡಬೇಕು-ಅಂದರೆ ತನಗ ಕೋಪ ಬಂದರೆ ಏನು ಮಾಡಬೇಕು ಎಂದು. (ಎಲ್ಲಿ ಹೋಗಬಹುದು ಮತ್ತು ಏನು ಮಾಡಬಹುದು ಇವುಗಳನ್ನು ಸೇರಿಸಿ). ಮಗುವು ತಳಮಳ/ಆಂದೋಳನಕ್ಕೆ ಒಳಗಾದಾಗ ಹೋಗಿ ಕುಳಿತುಕೊಳ್ಳಲು ಅನುಕೂಲವಾಗುವ ಹಾಗೆ ಶಾಲೆಯಲ್ಲಿ ಒಂದು ಪ್ರಶಾಂತವಾದ ಸ್ಥಳವನ್ನು ಗುರುತಿಸಬೇಕು. ಆತಂಕಕ್ಕೆ ಒಳಗಾದಾಗ ಮಗುವಿಗೆ ಅಲ್ಲಿಗೆ ಹೋಗುವುದನ್ನು ಹೇಳಿಕೊಡಬೇಕು. ಶಾಂತವಾಗಿ ಇರುವ ಸ್ಥಳಗಳಾದ ಕಂಪ್ಯೂಟರ್ ರೂಮ್, ಲೈಬ್ರರಿ ಅಥವಾ ಪ್ರಾರ್ಥನಾ ಕೊಠಡಿ ಇವುಗಳನ್ನು ನೀವು ಗುರುತಿಸಬಹುದು. ಅವನು ಅಲ್ಲಿ ಏನು ಮಾಡುತ್ತಾನೆಂಬುದು ಸಹ ಸ್ಪಷ್ಟವಾಗಿರಬೇಕು- ಓದಬೇಕೆಂದಿದ್ದರೆ ಯಾವ ಪುಸ್ತಕ, ಬಣ್ಣ ಹಚ್ಚುತ್ತಿದ್ದರೆ ಯಾವುದಕ್ಕೆ ಮತ್ತು ಕಂಪ್ಯೂಟರ್ ನಲ್ಲಿ ಕೆಲಸ ಮಾಡಬೇಕೆಂದಿದ್ದರೆ ಏನು ಮಾಡಬೇಕು ಎಂಬುದು ಸ್ಪಷ್ಟವಾಗಿರಬೇಕು
- ಮಗು ಕೋಪಗೊಂಡಿದ್ದರೆ ಅಥವಾ ಆತಂಕಕ್ಕೆ ಒಳಗಾಗಿದ್ದರೆ ನಿಮ್ಮ ಧ್ವನಿಯನ್ನು ಏರಿಸಿ ಮಾತನಾಡಬೇಡಿ ನಿಮ್ಮ ಮುಖಭಾವವನ್ನು ನೋಡಿ ಮಗು ಅರ್ಥ ಮಾಡಿಕೊಳ್ಳುತ್ತದೆ ಎಂದು ಭಾವಿಸಬೇಡಿ. ತಟಸ್ಥ ಮುಖಭಾವದೊಂದಿಗೆ ಶಾಂತವಾದ ಧ್ವನಿಯಲ್ಲಿ ಅವನೊಡನೆ ಮಾತನಾಡಿ. ಅವನು ಶಾಂತನಾಗಲು ನೀವು ದೃಶ್ಯ ಬೆಂಬಲವನ್ನು (ಶಾಂತಚಿತ್ತದಿಂದ ಇರುವ ವ್ಯಕ್ತಿಯ ಚಿತ್ರ ಅಥವಾ ಶಾಂತಕೊಠಡಿ) ಉಪಯೋಗಿಸಬಹುದು.
- ಬೆದರಿಕೆಗಳು ಅಥವಾ ಆಮಿಷಗಳು ಕೆಲಸ ಮಾಡುವುದಿಲ್ಲ. 'ನೀನು ಕೆಲಸವನ್ನು ಮುಗಿಸದಿದ್ದರೆ ನಿನಗೆ ಜೋಕಾಲಿ ಸಿಗುವುದಿಲ್ಲ' ಅಥವಾ 'ನೀನು ಕೆಲಸವನ್ನು ಮುಗಿಸಿದರೆ ನಾನು ನಿನಗೆ ಚಾಕೊಲೇಟ್ ಕೊಡುತ್ತೇನೆ' ಎಂದು ಹೇಳುವುದರ ಬದಲು 'ಕೆಲಸ ಮುಗಿಸು ಮತ್ತು ಚಾಕೊಲೇಟ್ ತೆಗೆದುಕೋ' ಎಂದಷ್ಟೇ ಹೇಳಿ.
- ಮಕ್ಕಳಿಗೆ ತಮ್ಮ ಭಾವನೆಗಳು ಮತ್ತು ಸಂವೇಗಗಳನ್ನು ಗುರುತಿಸಲು ಮತ್ತು ಅವುಗಳ ಹೆಸರನ್ನು ಹೇಳಲು ಹೇಳಿಕೊಡಬೇಕು.

  ಉದಾ: "ಸೀಮಾ ನಿನಗೆ ಹೊಡೆದಳು – ಅದರಿಂದ ನಿನಗೆ ಕೋಪ ಬಂತು."

  "ನಿನ್ನ ಬಳಿಯಿರುವ ಸಿಹಿತಿಂಡಿಯನ್ನು ನನ್ನ ಜೊತೆ ಹಂಚಿಕೊಂಡೆ – ನನಗೆ ಖುಷಿಯಾಯಿತು"
- ತಮ್ಮ ಸರದಿಗೋಸ್ಕರ ಕಾಯಲು ಆಟಿಸಂ ಇರುವ ಅನೇಕ ಮಕ್ಕಳು ಕಷ್ಟ ಪಡುತ್ತಾರೆ. ಕಾಯುವುದು ಎಂಬುದು ಬರಿಯ ಸಾಮಾಜಿಕ ಸಂಕಲ್ಪನೆಯಲ್ಲದೇ, ಸಮಯಕ್ಕೂ ಸಂಬಂಧಿಸಿದ ಒಂದು ಅಮೂರ್ತ ಕಲ್ಪನೆಯಾಗಿದೆ, ಆದ್ದರಿಂದ ಆಟಿಸಂ ಇರುವ ಮಕ್ಕಳಿಗೆ ಕಾಯುವಿಕೆಯ ಉದ್ದೇಶ ಅರ್ಥ ಮಾಡಿಕೊಳ್ಳಲು ಕಷ್ಟವಾಗುತ್ತದೆ. ಈ ಸಂಕಲ್ಪನೆಯನ್ನು ಪರಿಚಯಿಸಲು

ಕಾಯುವಿಕೆಯ ಅವಧಿಯನ್ನು ಸ್ಪಷ್ಟವಾದ ಕೊನೆ/ಅಂತ್ಯದೊಂದಿಗೆ ಗುರುತು ಮಾಡಬೇಕು. ಯಾವುದನ್ನು ನೀವು ಅಂತ್ಯ/ಮುಗಿಯಿತು ಎಂದು ಹೇಳುತ್ತಿರೋ ಅದು ಕಣ್ಣಿಗೆ ತೋರುವ ಮೂರ್ತರೂಪದಲ್ಲಿ ಸ್ಪಷ್ಟವಾಗಿರಬೇಕು ನೀವು ಇನ್ನೊಂದು ಮಗುವಿನ ಜೊತೆ ಮಾತನಾಡುತ್ತಿದ್ದೀರ ಮತ್ತು ಆಟಿಸಂ ಇರುವ ಮಗು ನಿಮ್ಮ ಗಮನವನ್ನು ಸೆಳೆದರೆ “ನಾನು ಮಹೇಶನ ಜೊತೆ ಮಾತನಾಡಿ ಮುಗಿಸಿದ ಮೇಲೆ ನಿನ್ನ ಜೊತೆ ಮಾತನಾಡುತ್ತೇನೆ” ಅಥವಾ “ಒಂದು ನಿಮಿಷ ತಾಳು, ನಿನ್ನ ಜೊತೆ ಮಾತನಾಡುತ್ತೇನೆ” ಎಂದು ಹೇಳಬಹುದು. ಕಾಯುವಿಕೆಯ ಅವಧಿಯನ್ನು ಮೊದಲು ಕಡಿಮೆಯಿಟ್ಟು ನಿಧಾನವಾಗಿ ಹೆಚ್ಚಿಸ ಬಹುದು. ನೆನಪಿನಲ್ಲಿಟ್ಟುಕೊಳ್ಳಬೇಕಾದ ಒಂದು ಮುಖ್ಯವಾದ ವಿಷಯವೆಂದರೆ ನೀವು ನಿಮ್ಮ ಮಾತಿನಂತೆ ನಡೆಯಬೇಕು.  ಒಂದ ನಿಮಿಷದ ನಂತರ ಮಾತನಾಡುತ್ತೇನೆ ಎಂದು ನೀವು ಮಗುವಿಗೆ ಹೇಳಿದ್ದರೆ, ನಿಮ್ಮ ಮಾತಿನಂತೆ ನಡೆಯಲು ಇನ್ನೊಂದು ಮಗುವಿನ ಜೊತೆಗಿನ ಮಾತುಕತೆ ಅರ್ಧಕ್ಕೆ ನಿಲ್ಲಸಬೇಕಾಗಬಹುದು.

- ಒಂದು ಒಳ್ಳೆಯ ಮಾದರಿಯಾಗಿ-ಇತರ ಮಕ್ಕಳು ಮತ್ತು ಸಿಬ್ಬಂದಿ ನೀವು ಆಟಿಸಂ ಇರುವ ಮಗುವಿನ ಜೊತೆ ಕೆಲಸ ಮಾಡುವುದನ್ನು ನೋಡುತ್ತಿರುತ್ತಾರೆ ಮತ್ತು ಕಲಿತುಕೊಳ್ಳುತ್ತಿರುತ್ತಾರೆ.

➢ ಸಾಮಾಜಿಕ ವಿಕಾಸ ಹೆಚ್ಚಿಸುವುದು -ಸ್ನೇಹಿತರ ವೃತ್ತ

- ವಿದ್ಯಾರ್ಥಿಯನ್ನು ವಿಭಿನ್ನ ಸನ್ನಿವೇಶಗಳಲ್ಲಿ ಬೆಂಬಲಿಸುವಂತಹ ಸೂಕ್ಷ್ಮ ಮನಸ್ಸಿನ ವಿದ್ಯಾರ್ಥಿಗಳ ಒಂದು ಸಣ್ಣ ಗುಂಪನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಿ. ಉದಾ: ಒಂದು ತರಗತಿಯಿಂದ ಇನ್ನೊಂದು ತರಗತಿಗೆ ಅವರ ಜೊತೆ ಹೋಗುವುದು, ಬಸ್ಸಿನಲ್ಲಿ ಒಟ್ಟಿಗೆ ಕುಳಿತುಕೊಳ್ಳುವುದು, ಜೊತೆಯಾಗಿ ಊಟ ಮಾಡುವುದು, ಬಿಡುವಿನ ಸಮಯದಲ್ಲಿ ಆಟವಾಡುವುದು, ಆಟವಾಡುವಾಗ ನಿಯಮಗಳನ್ನು ಹೇಳಿಕೊಡುವುದು, ಈ ಮಗುವನ್ನು ಬೇರೆ ಮಕ್ಕಳು ಬೆದರಿಸಲು ಅಥವಾ ಚುಡಾಯಿಸಲು ಪ್ರಯತ್ನಿಸಿದರೆ ಅವರಿಗೆ ಅರಿವು ಮೂಡಿಸುವುದು ಇತ್ಯಾದಿ.

ನೆನಪಿಡಿ – ಈ ಗುಂಪಿಗೆ ಆಟಿಸಂ ಇರುವ ಮಕ್ಕಳ ಜೊತೆ ಹೇಗೆ ಸಂವಹನ ಮಾಡಬೇಕು ಮತ್ತು ಅವರಲ್ಲಿ ಒಳಗೊಳ್ಳುವಿಕೆಯ ಭಾವನೆಯನ್ನು ಹೆಚ್ಚು ಮಾಡಲು ತಿಳುವಳಿಕೆಯ ಮತ್ತು ತರಬೇತಿಯ ಅಗತ್ಯವಿದೆ. ಈ ಗುಂಪು (ಶಿಕ್ಷಕರು ಮತ್ತು ಚಿಕಿತ್ಸಕರು) ಪ್ರಗತಿಯನ್ನು ಪುನರಾವಲೋಕನ ಮಾಡಲು ಮತ್ತು ಸವಾಲುಗಳನ್ನು ನಿಭಾಯಿಸಲು ತಂಡವನ್ನು ಭೇಟಿ ಮಾಡುವ ಅಗತ್ಯವಿದೆ.

ಸ್ನೇಹಿತರ ವೃತ್ತಕ್ಕೆ ಸಲಹೆಗಳು

- ಆ ಆಟಿಸಂ ಮಗು ಎಂದು ಹೇಳುವ ಬದಲು ಆ ಮಗುವನ್ನು ಹೆಸರಿನಿಂದ ಕರೆಯಿರಿ.
- ಸಂಶಯವಿದ್ದರೆ ಮಗುವಿನ ಬಗ್ಗೆ ಚೆನ್ನಾಗಿ ಗೊತ್ತಿರುವ ಅವನ ಸಹಪಾಠಿ ಅಥವಾ ಶಿಕ್ಷಕರನ್ನು ಕೇಳಿ.
- ಮಗುವಿನ ಜೊತೆ ಏನನ್ನಾದರೂ ಯೋಜನೆ ಮಾಡುತ್ತಿದ್ದರೆ -' ಆ ಮೇಲೆ ಹೊರಗಡೆ ಸಿಗುತ್ತೇನೆ' ಎಂದು ಹೇಳುವುದರ ಬದಲು 'ಕಂಪ್ಯೂಟರ್ ರೂಮಿನ ಹೊರಗಡೆ 2.15 ಕ್ಕೆ ಸಿಗುತ್ತೇನೆ' ಎಂದು ಹೇಳಿ.
- ತಡವಾಗಿ ಹೋಗಬೇಡಿ ಅಥವಾ ನಿಮ್ಮ ಯೋಜನೆಗಳನ್ನು ಆಗಾಗ್ಗೆ ಬಹಳ ಬದಲಾಯಿಸಬೇಡಿ- "ಕಾಯುವಿಕೆ"ಯ ಅಥವಾ " ಏನಾಗುತ್ತದೆ ಎಂದು ತಿಳಿಯದೇ ಇರುವ" ಸಂಕಲ್ಪನೆಗಳನ್ನು ಅರ್ಥವಾಡಿಕೊಳ್ಳಲು ಮಗುವಿಗೆ ಕಷ್ಟವಿರಬಹುದು.
- ಆಟಿಸಂ ಇರುವ ಮಕ್ಕಳು ನಿಮ್ಮ ಮಾತನ್ನು ಅಕ್ಷರಶಃ ತೆಗೆದುಕೊಳ್ಳುತ್ತಾರೆ - ಆದ್ದರಿಂದ ಹಾಸ್ಯ ಚಟಾಕಿಗಳು, ರೂಪಕಗಳು, ದ್ವಂದ್ವಾರ್ಥ ಬರುವ ಪದಗಳನ್ನು ಬಳಸಬೇಡಿ
- ಮಗುವು ಆ ರೀತಿ ಏಕೆ ವರ್ತಿಸುತ್ತದೆ ಎಂದು ಅರ್ಥವಾಗದ ಕಾರಣ ಇತರರು ಅಪಹಾಸ್ಯ ಮಾಡಬಹುದು - ಅವರಿಗೆ ಮಗುವಿನ ಸ್ಥಿತಿಯ ಬಗ್ಗೆ ಅರಿವು ಮೂಡಿಸಿ.

- ಮಕ್ಕಳಿಗೆ ಮೂಲಭೂತ ಸಾಮಾಜಿಕ ಕೌಶಲ್ಯಗಳನ್ನು ಹೇಳಿಕೊಡುವ ಅಗತ್ಯವಿದೆ - ಅಭಿನಂದಿಸುವುದು, ತಮ್ಮ ಸರದಿಗಾಗಿ ಕಾಯುವುದು, ಇತರರೊಡನೆ ಸಾಮಾಜಿಕ ಅಂತರವನ್ನು ಕಾಪಾಡಿಕೊಳ್ಳುವುದು, ಸಂಭಾಷಣೆಯನ್ನು ಪ್ರಾರಂಭಿಸುವುದು ವಿಷಯಗಳನ್ನು ಬದಲಿಸುವುದು ಮೊದಲಾದ ಕೌಶಲ್ಯಗಳನ್ನು, ನೀವು ಈ ತರಬೇತಿಯಿಂದ ಲಾಭ ಪಡೆಯುವ ಇತರ ಮಕ್ಕಳನ್ನು ಒಳಗೊಂಡ ಒಂದು ಸಣ್ಣ ಗುಂಪಿನಿಂದ ಪ್ರಾರಂಭಿಸಬಹುದು. ಉದಾ:ನಾಚಿಕೆ/ಸಂಕೋಚ ಸ್ವಭಾವದ ಮಕ್ಕಳು. ವಿಭಿನ್ನ ಸಾಮಾಜಿಕ ಸನ್ನಿವೇಶಗಳಲ್ಲಿ ಸೂಕ್ತ ವರ್ತನೆಯ ಮಾದರಿಯನ್ನು ತೋರಿಸಲು ನೀವು ನಾಟಕ ಮತ್ತು ಪಾತ್ರಾಭಿನಯವನ್ನು ಉಪಯೋಗಿಸಬಹುದು.
- ಸಾಮಾಜಿಕವಾಗಿ ಸೂಕ್ತವಲ್ಲದ ಅಥವಾ ವಿಚಿತ್ರ ವಿಷಯಗಳನ್ನು ಮಗು ಹೇಳಿದರೆ, ನೀವು ಸೂಕ್ತ ವಿಷಯಗಳ ಪಟ್ಟಿಯನ್ನು ಮಗುವಿಗೆ ಕೊಡಬಹುದು. ಹಾಗೆಯೇ ಅವನಿಗೆ ಸಂಭಾಷಣೆಯನ್ನು ಪ್ರಾರಂಭಿಸಲು ನುಡಿಗುಟ್ಟುಗಳು ಅಥವಾ ಸಾಲುಗಳನ್ನು ಕೊಡಿ.

| ಸೂಕ್ತವಲ್ಲದ ವಿಷಯಗಳು | ಸೂಕ್ತವಾದ ವಿಷಯಗಳು |
|---|---|
| • ನಿಮ್ಮ ವಯಸ್ಸೆಷ್ಟು ಎಂದು ಜನರನ್ನು ಕೇಳುವುದು<br>• ನಿಮ್ಮ ಸಂಪಾದನೆಯೆಷ್ಟು ಎಂದು ಕೇಳುವುದು<br>• ಅವರ ದೈಹಿಕ ರೂಪದ ಬಗ್ಗೆ ಟೀಕಿಸುವುದು | • ಅವರ ಹವ್ಯಾಸಗಳೇನು ಎಂದು ಕೇಳುವುದು<br>• ಅವರಿಗೆ ಇಷ್ಟವಾದ ವಿಷಯ ಏನು ಎಂದು ಕೇಳುವುದು<br>• ಹೊರಗಿನ ವಾತಾವರಣದ ಬಗ್ಗೆ ಮಾತನಾಡುವುದು |

- ಓದಲು ಬರುವಂತದ ಕೆಲವು ಮಕ್ಕಳಿಗೆ ಸನ್ನಿವೇಶಗಳನ್ನು ನಿಭಾಯಿಸಲು 'ಸಾಮಾಜಿಕ ಕತೆ'ಗಳನ್ನು ಹೇಳಿಕೊಡಬಹುದು, ಈ ಕಥೆಗಳನ್ನ ಸರಳ ಭಾಷೆಯಲ್ಲಿ ಸನ್ನಿವೇಶವನ್ನು ಹಂತ ಹಂತವಾಗಿ ಸ್ಪಷ್ಟವಾಗಿ ಬರೆಯಬಹುದು. ಇದು ಅವರಿಗೆ ಸನ್ನಿವೇಶವನ್ನು ನಿಭಾಯಿಸಲು ಸಹಾಯ ಮಾಡುತ್ತದೆ.

| ನನಗೆ ಸಿಟ್ಟು ಬಂದರೆ | 'ಹಲೋ' ಹೇಳುವುದು |
|---|---|
| • ಎಲ್ಲರಿಗೂ ಒಂದಲ್ಲಾ ಒಂದು ಬಾರಿ ಸಿಟ್ಟು ಬರುತ್ತದೆ<br>• ಕೆಲವೊಮ್ಮೆ ಶಾಲೆಯಲ್ಲಿ ನನಗೆ ಸಿಟ್ಟು ಬರುತ್ತದೆ.<br>• ನನಗೆ ಸಿಟ್ಟು ಬಂದಾಗ ನಾನು ಶಿಕ್ಷಕರನ್ನು ಹುಡುಕುತ್ತೇನೆ.<br>• ಅವರು ಸಿಕ್ಕಿದಾಗ ನಾನು ಪದಗಳನ್ನು ಒಳಸಿ ನನಗೆ ಸಿಟ್ಟು ಬಂದಿದೆ ಎಂದು ತಿಳಿಸಲು ಪ್ರಯತ್ನಿಸುತ್ತೇನೆ.<br>• ನನಗೆ ಸಿಟ್ಟು ಬಂದಿದೆ ಎಂದು ನಾನು ಹೇಳಬಹುದು.<br>• ನನಗೆ ಸಿಟ್ಟು ಬಂದಾಗ ಪದಗಳನ್ನು ಉಪಯೋಗಿಸುವುದು ಒಳ್ಳೆಯದು. | • ಜನರಿಗೆ ನಾನು 'ಹಲೋ' ಎಂದು ಹೇಳಿದರೆ ಇಷ್ಟವಾಗುತ್ತದೆ.<br>• ದಿನದ ಅನೇಕ ವೇಳೆಗಳಲ್ಲಿ ನಾನು ಅವರಿಗೆ 'ಹಲೋ' ಹೇಳಬಹುದು.<br>• ನಾನು ಬೆಳಿಗ್ಗೆ ಎದ್ದಾಗ ಅಮ್ಮನಿಗೆ 'ಹಲೋ' ಹೇಳಬಹುದು.<br>• ನಾನು ಬೆಳಿಗ್ಗೆ ಎದ್ದಾಗ ಅಪ್ಪನಿಗೆ 'ಹಲೋ' ಹೇಳಬಹುದು.<br>• ನನ್ನ ಬಸ್ಸಿನ ಡ್ರೈವರ್ ಗೆ 'ಹಲೋ' ಹೇಳಬಹುದು.<br>• ನಾನು ಶಾಲೆಗೆ ಹೋದಾಗ ನನ್ನ ಶಿಕ್ಷಕರಿಗೆ ಮತ್ತು ಸ್ನೇಹಿತರಿಗೆ ಹಲೋ ಹೇಳಬಹುದು.<br>• ಕಾರಿಡಾರ್ ನಲ್ಲಿ ಸಿಗುವ ಜನರಿಗೆ ನಾನು 'ಹಲೋ' ಹೇಳಬಹುದು. |

| | |
|---|---|
| • ಏನಾಯಿತೆಂದು ಅವರು ನನ್ನನ್ನು ಕೇಳುತ್ತಾರೆ<br>• ಇದ್ದರಿಂದ ನನಗೆ ಉತ್ತಮ ಭಾವನೆ ಉಂಟಾಗುತ್ತದೆ | • ನಾನು ಹಲೋ ಹೇಳುವುದರಿಂದ ಜನರಿಗೆ ಸಂತೋಷವಾಗುತ್ತದೆ. |

## ೧೧.೩ ಕಲಿಕೆಯ ಪರಿಸರ

➢ ಪರಿಸರವನ್ನು ಸಂಘಟಿಸುವುದು

- ಒಂದು ಸ್ಪಷ್ಟ ಚೌಕಟ್ಟು ಮತ್ತು ನಿಗದಿತ ದಿನಚರಿಯನ್ನು ಒದಗಿಸಿ ವಿದ್ಯಾರ್ಥಿಗೆ ಆ ದಿನದ ಕಾರ್ಯಕ್ರಮದ ಬಗ್ಗೆ ದಿನದ ಪ್ರಾರಂಭದಲ್ಲೇ ಗೊತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ದಿನವು ಕಳೆಯುತ್ತಿದ್ದಂತೆ ಆಗ್ಗಾಗೆ ನೋಡಲು ಅನುಕೂಲವಾಗುವಂತೆ ದೃಶ್ಯ ವೇಳಾ ಪಟ್ಟಿಯನ್ನು ಒದಗಿಸಿ. ಈ ವೇಳಾಪಟ್ಟಿಯು ಯಾವ ಚಟುವಟಿಕೆಗಳು ಯಾವ ಅನುಕ್ರಮದಲ್ಲಿ ನಡೆಯುತ್ತದೆ ಎಂಬುದನ್ನು ಹೇಳುತ್ತದೆ. ಈ ಕಾರ್ಯಕ್ರಮಗಳ ಪಟ್ಟಿಯು ಚಿತ್ರಗಳ, ಛಾಯಚಿತ್ರ, ಲಿಖಿತ ಸೂಚನೆಗಳು ಮತ್ತು ವೇಳಾಪಟ್ಟಿಗಳ ರೂಪದಲ್ಲಿ ಇರುಬಹುದು. ಇದು ಮಗುವಿನ ಅನುಕ್ರಮ ಸ್ಮೃತಿ (Sequential memory) ಮತ್ತು ಸಮಯದ ಸಂಘಟನೆಗಳಲ್ಲಿನ ತೊಂದರೆಗಳನ್ನು ಕಡಿಮೆ ಮಾಡಲು ಸಹಾಯ ಮಾಡತ್ತದೆ. ಮೌಖಿಕ ಭಾಷೆಯ ಗ್ರಹಿಕೆಯು ಸೀಮಿತವಾಗಿರುವ ಮಕ್ಕಳಿಗೆ ಸಹ ಇದು ಅವರಿಂದ ಏನನ್ನು ನಿರೀಕ್ಷಿಸಲಾಗುತ್ತದೆ ಎಂಬುದನ್ನು ತಿಳಿಸಲು ಸಹಾಯ ಮಾಡುತ್ತದೆ.
- ಒಂದು ಚಟುವಟಿಕೆಯ ಚಿತ್ರವಿರುವ ಕಾರ್ಡನ್ನು ಪ್ರತಿಯೊಂದು ಚಟುವಟಿಕೆ ಮುಗಿಯುತ್ತಿದ್ದಂತೆಯೇ ಅದಕ್ಕೆ ಸಂಬಂಧಿಸಿದ 'ಮುಗಿದಿದೆ' ಬಾಕ್ಸ್ ನಲ್ಲಿ ಇಡುವಂತೆ ಮಗುವಿಗೆ ಹೇಳಿ ಕೊಡುಬಹುದು. ಇದರಿಂದ ಮುಂದೆ ಏನು ಮಾಡಬೇಕೆಂಬುದು ಸಹ ಆ ಮಗುವಿಗೆ ತಿಳಿಯುತ್ತದೆ. ಮುಂದೆ ಎಲ್ಲಿ ಹೋಗಬೇಕೆಂಬುದನ್ನು ಇದು ಹೇಳುವುದರಿಂದ ಒಂದು ಚಟುವಟಿಕೆಯಿಂದ ಇನ್ನೊಂದಕ್ಕೆ ಮಗು ಸ್ವತಂತ್ರವಾಗಿ ಹೋಗಬಹುದು ಕೆಲವು ಉದಾಹರಣೆಗಳು (ಮಗುವಿನ ಅಗತ್ಯಗಳಿಗೆ ತಕ್ಕ ಹಾಗೆ ಮಾರ್ಪಡಿಸಿಕೊಳ್ಳಬಹುದು)

ಸಮಯವನ್ನು ಸಂಘಟಿಸಿಕೊಳ್ಳುವುದು

| ಬೆಳಗಿನ ದಿನಚರಿ | ಶಾಲೆಯ ವೇಳಾಪಟ್ಟಿ |
|---|---|
| ಹಲ್ಲನ್ನು ಉಜ್ಜು | ಶಾಲೆಗೆ ತಲುಪು, ತರಗತಿಗೆ ಹೋಗು |

| | |
|---|---|
| ಸ್ನಾನವನ್ನು ಮಾಡು | ಕೊಟ್ಟಿರುವ ಅಭ್ಯಾಸ ಪತ್ರಿಕೆಯನ್ನು ಮುಗಿಸು |
| ಬಟ್ಟೆಯನ್ನು ಧರಿಸಿಕೊ | ಊಟ |
| ತಿಂಡಿಯನ್ನು ತಿನ್ನು | ಆಟ |
| ಬ್ಯಾಗ್ ಅನ್ನು ತೆಗೆದುಕೊ | ಚಿತ್ರಕಲೆಯ ತರಗತಿ |
| ಶಾಲೆಗೆ ಹೋಗು | ಮನೆ |

- ಯಾವ ಚಟುವಟಿಕೆಗಳನ್ನು ಮಾಡಬೇಕೆಂದು ಹೇಳುವುದರ ಜೊತೆಗೆ, ಚಟುವಟಿಕೆಗಳನ್ನು ಮಾಡುವುದಕ್ಕೆ ಸಹ ಮಕ್ಕಳಿಗೆ ಸ್ಪಷ್ಟತೆಯ ಅಗತ್ಯವಿದೆ. ಅದು ಗಣಿತವಾಗಿದ್ದರೆ, ಅದರಲ್ಲಿ ನಿಖರವಾಗಿ ಏನನ್ನು ಮಾಡಬೇಕು ಮತ್ತು ಯಾವ ಕ್ರಮವನ್ನು ಪಾಲಿಸಬೇಕು ಎಂಬ ಸ್ಪಷ್ಟತೆ ಬೇಕು. ಮೌಖಿಕ ಸೂಚನೆಗಳನ್ನಷ್ಟೇ ನೀಡದೆ ಬರೆದುಕೊಡುವುದರಿಂದ ಸಹಾಯವಾಗಬಹುದು.
- ಆಟಿಸಂ ಇರುವ ಮಕ್ಕಳು ದೃಶ್ಯಗಳಲ್ಲಿ ಆಲೋಚನೆ ಮಾಡುತ್ತಾರೆ- ಅವರು ಪದಗಳಿಂದ ಅಲ್ಲ ಚಿತ್ರಗಳಿಂದ ಆಲೋಚನೆ ಮಾಡುತ್ತಾರೆ. ಸಂಕಲ್ಪನೆಗಳನ್ನು ಬೋಧಿಸುವಾಗ-ಮೂರ್ತ ದೃಶ್ಯ ವಿಧಾನಗಳನ್ನು ಆದಷ್ಟು ಬಳಸುವುದು ಒಳ್ಳೆಯದು. ಉದಾಃ ಮೇಲೆ ಮತ್ತು ಕೆಳಗೆ ಈ ಪರಿಕಲ್ಪನೆಗಳನ್ನು ಬೋಧಿಸುವಾಗ, ನೀವು ಒಂದು ಏರೋಪ್ಲೇನ್ ನ ಮಾದರಿಯನ್ನು ಮಾಡಿ ಅದಕ್ಕೆ 'ಮೇಲೆ' ಎಂಬ ಪಟ್ಟಿಯನ್ನು ಹಚ್ಚಿ ಮೇಲೆ ಇರಿಸಿ, ನಂತರ ಅದಕ್ಕೆ 'ಕೆಳಗೆ' ಎಂಬ ಪಟ್ಟಿಯನ್ನು ಹಚ್ಚಿ ಕೆಳಗೆ ಇರಿಸಿ.
- ನೀವು ಅರ್ಧ ಮತ್ತು ಪೂರ್ಣ ಎಂಬ ಪರಿಕಲ್ಪನೆಗಳನ್ನು ಬೋಧಿಸುತ್ತಿದ್ದರೆ 'ಪೂರ್ಣ' ಎಂಬ ಪಟ್ಟಿ ಹಚ್ಚಿದ ಒಂದು ಸೇಬು ಹಣ್ಣನ್ನು ಮತ್ತು 'ಅರ್ಧ' ಎಂಬ ಪಟ್ಟಿ ಪಚ್ಚಿದ ಇನ್ನೊಂದು ಅರ್ಧ ಸೇಬುಹಣ್ಣನ್ನು ತೆಗೆದುಕೊಳ್ಳಬೇಕು.
- ನೀವು ಮೂರ್ತರೂಪದ ವಸ್ತುಗಳನ್ನು ಉಪಯೋಗಿಸುತ್ತಿದ್ದರೆ, ಆ ವಸ್ತುಗಳನ್ನು ಪ್ರತಿನಿಧಿಸುವ ಬೇರೆ ವಸ್ತುಗಳನ್ನು ಉಪಯೋಗಿಸಬೇಡಿ ಏಕೆಂದರೆ ಈ ಮಕ್ಕಳಿಗೆ ಕಲ್ಪನೆ ಮಾಡಿಕೊಳ್ಳುವುದರಲ್ಲಿ ತೊಂದರೆ ಇರುತ್ತದೆ. ಉದಾಃ ಒಂದು ಪೆನ್ನು ಅಥವಾ ಡಬ್ಬಿಯನ್ನು ತೆಗೆದುಕೊಂಡು "ಇದನ್ನು ಕಾರು ಎಂದು ಊಹಿಸಿಕೊಳ್ಳೋಣ" ಎಂದು ಹೇಳಿ ಅದನ್ನು ಮೇಜಿನ ಮೇಲೆ ಉರುಳಿಸುವುದನ್ನು ಮಾಡಬೇಡಿ.
- ಒಂದು ಸಂಕಲ್ಪನೆಯನ್ನು ವಿಭಿನ್ನ ಸನ್ನಿವೇಶಗಳಲ್ಲಿ ಹೇಳಿಕೊಡಿ. ಏಕೆಂದರೆ ಇದರಿಂದ ಮಗು ಇತರ ಸನ್ನಿವೇಶಗಳಲ್ಲಿ ಕಲಿತಿರುವುದನ್ನು ಸಾಮಾನ್ಯೀಕರಿಸಲು ಸಹಾಯವಾಗುತ್ತದೆ. ಉದಾಃ ನೀವು ಒಂದು ಮಗುವಿಗೆ ತರಗತಿಯಲ್ಲಿ ಇತರರನ್ನು

ದೂಡದಿರಲು ಹೇಳಿಕೊಡುತ್ತಿದ್ದರೆ ಅದನ್ನೇ ಆಟದ ಮೈದಾನ ಮತ್ತು ಬಸ್ಸಿನಲ್ಲಿ ಮಾಡದಿರುವಂತೆ ನೆನಪಿಸಬೇಕಾದ ಅಗತ್ಯವಿರುತ್ತದೆ.

- ಕೆಲವು ಮಕ್ಕಳಿಗೆ ಚಟುವಟಿಕೆ ಮಾಡಬೇಕಾದಾಗ ಸಹಾಯದ ಅಗತ್ಯವಿರುತ್ತದೆ. ಅಂತಹ ಮಕ್ಕಳಿಗೆ ಸಹಪಾಠಿಗಳನ್ನು ಜೊತೆಗಾರರಾಗಿ ಮಾಡಿ ಅಥವಾ ಸ್ವಯಂ ಸೇವಕರ ಹೆಚ್ಚುವರಿ ಸಹಾಯವನ್ನು ನೀಡಿ.

➢ ಮಕ್ಕಳ ಜೊತೆ ಸಂವಹನ - ಸೂಚನೆಗಳನ್ನು ನೀಡುವುದು

- ಕೆಲವು ಮಕ್ಕಳು, ಮೌಖಿಕ ಅಥವಾ ದೃಶ್ಯಗಳಲ್ಲಿ ಯಾವುದಾದರೂ ಒಂದು ಮಾಧ್ಯಮದ ಮೂಲಕ ಸೂಚನೆಗಳನ್ನು ನೀಡಿದರೆ ಹೆಚ್ಚು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲರು. ಎರಡನ್ನು ಒಂದೇ ಬಾರಿಗೆ ಬಳಸಿದರೆ ಅವರಿಗೆ ಗೊಂದಲವಾಗಬಹುದು.
- ಕಣ್ಣಲ್ಲಿ ಕಣ್ಣಿಟ್ಟು ನೋಡುವಂತೆ ಒತ್ತಾಯಿಸಬೇಡಿ - ಕೆಲವು ಮಕ್ಕಳಿಗೆ ದೃಶ್ಯ ಮತ್ತು ಶ್ರವಣ ಪ್ರಚೋದನೆಗಳನ್ನು ಒಂದೇ ಬಾರಿಗೆ ಸಂಸ್ಕರಿಸಲು ಕಷ್ಟವಾಗುತ್ತದೆ. ಅವರು ನಿಮ್ಮ ಕಡೆ ನೋಡಬಹುದು ಅಥವಾ ನೀವು ಏನು ಹೇಳುತ್ತಿದ್ದೀರ ಎಂದು ಅರ್ಥ ಮಾಡಿಕೊಳ್ಳಬಹುದು. ಮಗುವಿನ ಹೆಸರಿಟ್ಟು ಕರೆದು ಗಮನ ನೀಡಲು ಹೇಳಿ. ಮಗು ನಿಮ್ಮ ಕಡೆ ನೋಡದಿದ್ದರೆ ಅವನು ಗಮನಕೊಡುತ್ತಿಲ್ಲ ಎಂದರ್ಥವಲ್ಲ.
- ಮೌಖಿಕ ಸೂಚನೆಗಳನ್ನು ಕೊಡಬೇಕಾದರೆ ಚಿಕ್ಕ ಮತ್ತು ಸರಳ ವಾಕ್ಯಗಳಿಂದ ಸ್ಪಷ್ಟ ಸೂಚನೆಗಳನ್ನು ನೀಡಿ. ನಿಮಗೆ ಏನು ಬೇಕು ಎಂದು ನಿಖರವಾಗಿ ಹೇಳಿ. ಉದಾ: ಮಗುವು ವಿಜ್ಞಾನದ ನೋಟ್ ಪುಸ್ತಕವನ್ನು ತೆಗೆಯಬೇಕೆಂಬುದು ನಿಮ್ಮ ಉದ್ದೇಶವಾಗಿದ್ದರೆ 'ನಿಮ್ಮ ನೋಟ್ ಪುಸ್ತಕಗಳನ್ನು ತೆಗೆಯಿರಿ' ಎಂದು ಹೇಳುವ ಬದಲು 'ನಿಮ್ಮ ವಿಜ್ಞಾನದ ನೋಟ್ ಪುಸ್ತಕವನ್ನು ತೆಗೆಯಿರಿ' ಎಂದು ಹೇಳಿ. ದೃಶ್ಯ ಸೂಚನೆಗಳಾಗಿದ್ದರೆ ಅವರಿಗೆ ಏನು ಮಾಡಬೇಕೆಂಬುದನ್ನು ತೋರಿಸಿ. ಉದಾ:ಮಗುವು ತೆಗೆಯಬೇಕಾಗಿರುವ ಪಠ್ಯಪುಸ್ತಕವನ್ನು ಎತ್ತಿ ಹಿಡಿಯಿರಿ. ಪುಟಸಂಖ್ಯೆಯನ್ನು ಬೋರ್ಡಿನ ಮೆಲೆ ಬರೆಯಿರಿ.
- ಅನೇಕ ಸೂಚನೆಗಳನ್ನು ಒಟ್ಟಿಗೇ ನೀಡಬೇಡಿ - ಅವುಗಳನ್ನು ಸಣ್ಣ ಸಣ್ಣ ಸೂಚನೆಗಳನ್ನಾಗಿ ವಿಂಗಡಿಸಿ - ಮಗು ಒಂದು ಹಂತ ಮುಗಿಸಿದ ಮೇಲೆ ಮುಂದಿನ ಸೂಚನೆ ನೀಡಿ.
- ನೀವು ತರಗತಿಯನ್ನು ಉದ್ದೇಶಿಸಿ ಮಾತನಾಡುವಾಗ, ಒಂದು ಮಗುವಿಗೆ ತಾನೂ ತರಗತಿಗೆ ಸೇರಿ ಕೊಂಡಿದ್ದೇನೆ ಎಂದು ಅರ್ಥಮಾಡಿಕೊಳ್ಳಲು ಕಷ್ಟವಾದರೆ, ಅವನಿಗೆ ಪ್ರತ್ಯೇಕವಾಗಿ ಹೇಳಿ, ಉದಾ: 'ಈಶಾನ್, ನಾನು ಹೇಳುವುದನ್ನು ಕೇಳು'.

- ಮಗುವಿಗೆ ಒಂದು ಸಂದೇಶ ಸ್ವೀಕರಿಸಿ ಅದಕ್ಕೆ ಪ್ರತಿಕ್ರಿಯಿಸಲು ಒಂದು 'ಕಾಯುವ ಸಮಯ'ವನ್ನು ನೀಡಿ. ಮಾಹಿತಿಯನ್ನು ಸಂಸ್ಕರಿಸಲು ಅಂದಾಜು ಸಮಯ 30-60 ಸೆಕಂಡುಗಳು. ಆ ಅವಧಿಯೊಳಗೆ ಸೂಚನೆಗಳನ್ನು ಪುನಃ ಹೇಳುವುದರಿಂದ ಗ್ರಹಿಸಲು ಸಹಾಯವಾಗುವುದಿಲ್ಲ. ಉತ್ತಮ ವಿಧಾನವೆಂದರೆ ಮಗುವಿನ ಅಗತ್ಯಗಳನ್ನು ಅವಲಂಬಿಸಿ, 30-60 ಸೆಕೆಂಡುಗಳ ಸಮಯವನ್ನು ಮಗುವಿಗೆ ಕೊಡುವುದು.
- ಮಕ್ಕಳಿಗೆ ಆಯ್ಕೆ ಮಾಡಿಕೊಳ್ಳುವ ಅವಕಾಶವಿಲ್ಲದಿದ್ದರೆ ಅಥವಾ ನೀವು 'ಇಲ್ಲ' ಎಂದು ಕೇಳಲು ಸಿದ್ದರಾಗಿ ಇಲ್ಲದಿದ್ದರೆ ಆಯ್ಕೆಗಳಿರುವ ಪ್ರಶ್ನೆಗಳನ್ನು ಕೇಳಬೇಡಿ. 'ನೀವು ಇಂಗ್ಲೀಷ್ ತರಗತಿಗೆ ಸಿದ್ದರಾಗಿದ್ದೀರಾ?' ಎಂದು ಕೇಳಿದರೆ 'ಇಲ್ಲ' ಎಂಬ ಪ್ರತಿಕ್ರಿಯೆ ಬರಬಹುದು. ಆದ್ದರಿಂದ 'ಇಂಗ್ಲೀಷ್ ರೀಡರ್ ನಲ್ಲಿ ಮೂರನೆಯ ಅಧ್ಯಾಯವನ್ನು ತೆಗೆಯಿರಿ' ಎಂದು ಹೇಳುವುದು ಉತ್ತಮ
- ಮಗುವಿಗೆ ಏನು ಮಾಡಬಾರದು ಎಂದು ಹೇಳುವುದರ ಬದಲು ಏನು ಮಾಡಬೇಕು ಎಂದು ಹೇಳಿ ಉದಾ: "ಒಂದೇ ಸಮನೆ ಚಡಪಡಿಸಬೇಡ" ಎಂದು ಹೇಳುವ ಬದಲು "ನೆಟ್ಟಗೆ ನಿಲ್ಲು" ಎಂದು ಹೇಳಿ. ' ಅಲ್ಲಿ ಇಲ್ಲಿ ನೋಡುತ್ತಿರಬೇಡ ' ಎಂದು ಹೇಳುವ ಬದಲು 'ಪುಸ್ತಕವನ್ನು ನೋಡು' ಎಂದು ಹೇಳಿ.
- ನೀವು ಪದಗಳನ್ನು ಉಪಯೋಗಿಸುವುದರಲ್ಲಿ ಸುಸಂಬದ್ಧತೆ ಇರಲಿ. ಪರ್ಯಾಯ ಪದಗಳನ್ನು ಬಳಸಬೇಡಿ. ಒಂದು ಬಾರಿ 'ನಕಲು ಮಾಡುವ ಪುಸ್ತಕ' ಇನ್ನೊಂದು ಬಾರಿ 'ನೋಟ್ ಪುಸ್ತಕ' ಎಂದು ಹೇಳದೆ ಎರಡರಲ್ಲಿ ಒಂದನ್ನು ಬಳಸಿ. ಹಾಗೆಯೇ ಕೆಫೆಟೇರಿಯಾ ಅಥವಾ ಭೋಜನಶಾಲೆ ಯಾವುದಾದರೂ ಒಂದನ್ನು ಹೇಳಿ ಎರಡನ್ನೂ ಅಲ್ಲ.
- ಮುಗಿಸಿದ/ನಂತರ ಅಥವಾ ಮೊದಲು/ನಂತರ ಎನ್ನುವ ಹೇಳಿಕೆಗಳನ್ನು ಬಳಸಿ. ಉದಾ: 'ನಿನ್ನ ಅಭ್ಯಾಸ ಪತ್ರಿಕೆಯನ್ನು ಮುಗಿಸು ನಂತರ ಕಂಪ್ಯೂಟರ್ ನಲ್ಲಿ ಆಟವಾಡು'.

➢ ಸಂರಚಿತವಾಗಿರದ ಶಾಲೆಯ ಸಮಯದಲ್ಲಿ ಸಹಾಯ

- ತರಗತಿಯೊಳಗೆ ಮಕ್ಕಳು ಕಳೆಯುವ ಸಮಯವು ಸಂರಚಿತವಾಗಿರುತ್ತದೆ ಎಂಬುದನ್ನು ಮರೆಯಬೇಡಿ -ಅವರಿಗೆ ಸಂರಚಿತವಲ್ಲದ ಸಮಯದಲ್ಲಿ, ಅದರಲ್ಲೂ ತರಗತಿಯ ಹೊರಗೆ, ಸಹಾಯ ಬೇಕಾಗುತ್ತದೆ. ಉದಾ:ಊಟದ ಸಮಯ, ಆಟದ ಮೈದಾನ, ಶೌಚಾಲಯ, ಬಸ್ಸು, ಒಂದು ತರಗತಿಯಿಂದ ಇನ್ನೊಂದು ತರಗತಿಗೆ ಹೋಗುವುದು. ಇಂತಹ ಅಸಂರಚಿತ ಸಮಯಗಳು ಆಟಿಸಂ

ಇರುವ ಮಕ್ಕಳನ್ನು ಬಹಳ ಅಂಜಿಸಬಹುದು. ಉದಾ: ತರಗತಿಯಲ್ಲಿ ಮತ್ತು ಶಾಲೆಯ ಕಾರಿಡಾರ್ ಗಳಲ್ಲಿ ಮಕ್ಕಳು ಓಡುತ್ತಿರುವುದು, ಜೋರು ದನಿಯಲ್ಲಿ ಮಕ್ಕಳು ಮಾತನಾಡುತ್ತಿರುವುದು ಮತ್ತು ನಗುತ್ತಿರುವುದು. ಇದೇ ಕಾರಣಕ್ಕಾಗಿ ಆಟಿಸಂ ಇರುವ ಅನೇಕ ಮಕ್ಕಳು ಬಿಡುವಿನ ಸಮಯಕ್ಕಿಂತ ಹೆಚ್ಚಾಗಿ ಪಾಠಗಳನ್ನು ಇಷ್ಟ ಪಡುತ್ತಾರೆ. ಸಂರಚಿತವಲ್ಲದ ಸಮಯವನ್ನು ಸರಿಯಾಗಿ ನಿಭಾಯಿಸದಿದ್ದರೆ ಅದು ಒಂಟಿತನ, ಸಿಟ್ಟು, ಆಕ್ರಮಣಕಾರಿ ವರ್ತನೆ ಮತ್ತು ಬೇರೆ ಮಕ್ಕಳಿಂದ ದಬಾದುಬಿಯಲ್ಲಿ ಕೊನೆಗೊಳ್ಳಬಹುದು

ಅಂತಹ ಸಮಯಗಳಲ್ಲಿ ಉಪಯೋಗಿಸಬಹುದಾದ ಕೆಲವು ತಂತ್ರಗಳು ಕೆಳಗಿನವುಗಳನ್ನು ಒಳಗೊಂಡಿವೆ.

- ಒಂದು ರಚನೆ/ಚೌಕಟ್ಟನ್ನು ತರುವುದು – ತಾವು ಇಷ್ಟ ಪಡುವ ಚಟುವಟಿಕೆಗಳನ್ನು ಮಾಡಲು ಮಕ್ಕಳನ್ನು ತಯಾರು ಮಾಡುವುದು. ಉದಾ: ತರಗತಿಯಲ್ಲಿ ಅಥವಾ ಈಗಾಗಲೇ ಗೊತ್ತು ಪಡಿಸಿದ ಶಾಂತ ಸ್ಥಳದಲ್ಲಿ ಓದಲು ಪುಸ್ತಕವನ್ನು ತರುವುದು, ಕುಳಿತು ಒಂದು ಪಜಲ್ ಮಾಡುವುದು, ಸಂಗೀತವನ್ನು ಕೇಳುವುದು, ಚಿತ್ರಕಲೆ, ಸಂಗೀತ ಇತ್ಯಾದಿ.
- ಹಿಂದೆ ಹೇಳಿದಂತೆ ಆ ಮಗುವಿನ ಸ್ನೇಹಿತರ ವೃತ್ತ ಆ ಮಗುವಿಗೆ ಇಂತಹ ಸಂರಚಿತವಲ್ಲದ ಸಮಯಗಳಲ್ಲಿ ಬೆಂಬಲ ನೀಡಲು ಜೊತೆಯಾಗಿರಬಹುದು.

## *೧೨. ಆಟಿಸಂ ಇರುವ ವ್ಯಕ್ತಿಗಳು ಬರೆದಿರುವ ಪುಸ್ತಕಗಳು

(*ಗಮನಿಸಿ: ಈ ಪುಸ್ತಕಗಳ ಶೀರ್ಷಿಕೆಗಳನ್ನು ಕನ್ನಡಕ್ಕೆ ಅನುವಾದಿಸುವುದು ಸೂಕ್ತವಲ್ಲ. ಇದರಿಂದ ಈ ಪುಸ್ತಕ ಹುಡುಕುವವರಿಗೆ ಅಥವಾ ಕೊಳ್ಳಲು ಬಯಸುವವರಿಗೆ ಉಪಯೋಗವಾಗುವುದಿಲ್ಲ. ಮೂಲ ಆಂಗ್ಲ ಶೀರ್ಷಿಕೆಯೇ ಇರಲಿ)

Temple Grandin

- Unwritten rules of social relationships.
- Thinking in pictures and other reports from my life with Autism
- Emergence: Labelled Autistic

Donna Williams:

- Nobody, Nowhere: An extraordinary Autobiography of an Autistic.
- Somebody, Somewhere: Breaking free from the world of Autism
- Like color to the blind: Soul searching and Soul finding.
- Autism and Sensing: the unlost

- Exposure Anxiety: The invisible cage. A exploration of self- protection response in the Autism spectrum and beyond.
- Everyday heaven: Journeys beyond the stereotypes of Autism.

Sean Barron

- There's  a boy in here. Emerging from the bonds of Autism. With Judy Barron
- Unwritten rules of social relationships. With Temple Grandin.

Erika Hammerschmidt

- Born on the wrong planet.
- Congratulations! It's Asperger syndrome.

## ೧೩.ತರಗತಿಯಲ್ಲಿ ಆಟಿಸಂ ಅನ್ನು ಪರಿಚಯಿಸಲು ಆಟಗಳು

### ಅ.ಒಂದು ಅನುಕ್ರಮದ ಕಂಠಪಾಠದ ಆಟ -

ಕ್ರಮ ಮತ್ತು ಅನುಕ್ರಮದ ಬಗ್ಗೆ ಒಲವಿರುವ ಆಟಿಸಂ ಇರುವ ಕೆಲವು ಮಕ್ಕಳು ಇದನ್ನು ಇಷ್ಟ ಪಡುತ್ತಾರೆ ಮತ್ತು ಚೆನ್ನಾಗಿ ಆಡುತ್ತಾರೆ. ತರಗತಿಯ ಮಕ್ಕಳನ್ನು ವೃತ್ತಾಕಾರವಾಗಿ ನಿಂತುಕೊಳ್ಳಲು ಹೇಳಿ, ಒಬ್ಬ ಮಗುವಿಗೆ ಇವತ್ತು ನಾನು ಅಂಗಡಿಗೆ ಹೋಗಿ - … ಅನ್ನು ತಂದೆ  ಎಂದು ಒಂದು ವಸ್ತುವನ್ನು ನೆನಪಿಸಿಕೊಂಡು ಅದರ ಹೆಸರನ್ನು ವಾಕ್ಯದ ಕೊನೆಯಲ್ಲಿ ಸೇರಿಸಲು ಹೇಳಿ. ವೃತ್ತದಲ್ಲಿ ನಂತರ ಇರುವ ವ್ಯಕ್ತಿ ಮೊದಲು ಹೇಳಿದ ವಾಕ್ಯವನ್ನು ಹೇಳಿ ಅದಕ್ಕೆ ತಾನು ಆರಿಸುವ ವಸ್ತುವಿನ ಹೆಸರನ್ನೂ ಸೇರಿಸಬೇಕು. ಇದು ವೃತ್ತದಲ್ಲಿ ಯಾರಾದರೂ ತಪ್ಪು ಮಾಡುವವರೆಗೂ ಮುಂದುವರೆಯತ್ತದೆ. ತಪ್ಪು ಮಾಡಿದ ವ್ಯಕ್ತಿಯನ್ನು ಕುಳಿತುಕೊಳ್ಳಲು ಹೇಳಿ ಆಟ ಮುಂದುವರೆಯುತ್ತದೆ. ಹೀಗೆ ವೃತ್ತದಲ್ಲಿ ಕೊನೆಯ ವ್ಯಕ್ತಿ ಉಳಿಯುವವರೆಗೂ ಆಟ  ಮುಂದುವರಿಯುತ್ತಾ ಹೋಗುತ್ತದೆ. ತರಗತಿಯ ಮಕ್ಕಳ ಆಸಕ್ತಿಗನುಗುಣವಾಗಿ ವಾಕ್ಯವನ್ನು ಮಾರ್ಪಡಿಸಿಕೊಳ್ಳಬಹುದು.

- ಕರ್ಕಶವೆನ್ನಿಸುವ ಶಬ್ದಗಳಾದ ಡ್ರಮ್, ವ್ಯಾಕ್ಯೂಮ್ ಕ್ಲೀನರ್ ಮತ್ತು ರೇಡಿಯೋಗಳ ಶಬ್ದಗಳನ್ನು ಆಟವಾಡುವಾಗ ಕೇಳಿಸಬಹುದು. ಈ ಶಬ್ಧಗಳು ಮನಸ್ಸನ್ನು ಕೇಂದ್ರೀಕರಿಸಲು ಕಷ್ಟಮಾಡುತ್ತವೆ. ಇದರಿಂದ ಏಕೆ ಆಟಿಸಂ ಇರುವ ಮಕ್ಕಳಿಗೆ ಏಕಾಗ್ರತೆಗೆ ಅಡ್ಡಬರುವ ವಿಷಯಗಳಿಗೆ ಹೊಂದಿಕೊಳ್ಳುವುದು ಕಷ್ಟ ಎಂಬುದರ ಸ್ಪಷ್ಟ ಅರಿವಾಗುತ್ತದೆ.

- ಈ ಆಟವು ಅವರಿಗೆ ಹೇಗೆನ್ನಿಸಿತು ಎಂದು ಮಕ್ಕಳನ್ನು ಕೇಳಿ. ಜೋರು/ಕರ್ಕಶ ದನಿಯು ಶುರುವಾದಾಗ ಯಾರಿಗಾದರೂ ಹತಾಶೆಯಾಯಿತೇ ಎಂದು ಕೇಳಿ.

## ಆ.ಸಂವೇದನೆಯ ಆಟ

ಅನಿರೀಕ್ಷಿತ ಘಟನೆಗಳು ಉಂಟು ಮಾಡುವ ಅಹಿತಕಾರಿ ಅನುಭವಗಳನ್ನು ಆಟಿಸಂ ಇರುವ ವ್ಯಕ್ತಿಗಳು ಪ್ರತಿದಿನ ಹೇಗೆ ನಿಭಾಯಿಸುತ್ತಾರೆ ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣವನ್ನು ಈ ಆಟವು ವಿದ್ಯಾರ್ಥಿಗಳಿಗೆ ಕೊಡುತ್ತದೆ.

- ತಿನ್ನಬಹುದಾದಾ ಮತ್ತು ವಿವಿಧ ಸ್ಪರ್ಶಜ್ಞಾನ ನೀಡುವ ವಸ್ತುಗಳನ್ನು ಆಯ್ಕೆಮಾಡಿ ಒಂದು ಡಬ್ಬದಲ್ಲಿರಿಸಿ. ಇವುಗಳು ಇಂಸ್ಟಾಂಟ್ ಕಾಫಿಯ ಹರಳುಗಳಿಂದ ಹಿಡಿದು ಜೆಲ್ಲಿಯವರೆಗೆ ವಿಭಿನ್ನವಾಗಿರಬಹುದು. ಒಬ್ಬ ವಿದ್ಯಾರ್ಥಿಯನ್ನು ಕ್ಲಾಸಿನ ಮುಂದೆ ಕುಳ್ಳಿರಿಸಿ ಅವನ/ಳ ಕಣ್ಣಿಗೆ ಬಟ್ಟೆಯನ್ನು ಕಟ್ಟಿ. ನೀವು ಆರಿಸಿದ ಪ್ರತಿಯೊಂದು ಸಂವೇದನೆಯ ವಸ್ತು ವನ್ನು ಮುಟ್ಟಿನೋಡಲು ಅಥವಾ ರುಚಿ ನೋಡಲು ಹೇಳಿ. ಸಂವೇದನಾ ವಸ್ತು ಅನಿರೀಕ್ಷಿತವಾಗಿದ್ದಷ್ಟೂ ವಿದ್ಯಾರ್ಥಿ ಹೆಚ್ಚು ಚಕಿತನಾಗುತ್ತಾನೆ/ಳೆ. ಕಾಫಿ ಹರಳಿನಂತಹವು ಬಹಳ ಅಹಿತಕಾರಿಯಾಗಿದ್ದು ಹೇಗೆ ಅನಿರೀಕ್ಷಿತ ಘಟನೆಗಳು ಕೆಲವುವೇಳೆ ಕಷ್ಟದಾಯಕವಾಗಬಹುದು ಎಂಬ ಉತ್ತಮ ತಿಳಿವು ಒದಗಿಸುತ್ತದೆ..ನೀವು ಆಯ್ಕೆ ಮಾಡಿದ ಬೇರೆ ಬೇರೆ ವಿದ್ಯಾರ್ಥಿಗಳನ್ನು ಅವರಿಗೆ ಇಷ್ಟಪಡದಿದ್ದ ವಸ್ತುವಿನ ಸ್ಪರ್ಶ ಅಥವಾ ರುಚಿಯ ಅನುಭವ ಹೇಗಿತ್ತು ಎಂದು ಕೇಳಿ.
- 
- ನೀವು ತರಗರಿಯ ಮಕ್ಕಳಿಗೆ ತಿನ್ನಲು ಅಥವಾ ಏನನ್ನಾದರೂ ನೀಡಿ. ಅದು ಸಾಮಾನ್ಯವಾಗಿ ಅವರು ತಿನ್ನವು ವಸ್ತುವಿನಂತೆ ಕಂಡರೂ ವಾಸ್ತವವಾಗಿ ಅದು ಬೇರ ಆಗಿರುತ್ತದೆ - ಚಾಕೊಲೇಟ್ ಸವರಿದ ಸ್ಯಾಂಡ್ ವಿಚ್ ಆಗಿದ್ದರೂ ಅದರೊಳಗೆ ಅರೆದ ಸಾಸಿವೆ ಅಡಗಿಸಿರಬಹುದು ಅಥವಾ ನಿಂಬೆ ನೀರು ಅಥವಾ ನೀರಿನಲ್ಲಿ ಬಣ್ಣವಿಲ್ಲದೆ ರುಚಿಕೊಡುವ ಸೋಂಪು ಬೀಜ ಸೇರಿರಬಹುದು. ಅನಿರೀಕ್ಷಿತವಾಗಿರುವುದು ನಾವು ಅಂದುಕೊಳ್ಳುವುದಕ್ಕಿಂತ ಅಘಾತಕಾರಿಯಾಗಿರಬಹುದು. ಆಟಿಸಂ ಇರುವ ವ್ಯಕ್ತಿಗಳೊಂದಿಗೆ ಸಂಬಂಧ ಬೆಳೆಸಿಕೊಳ್ಳಬೇಕಾದರೆ ವಿಶ್ವಾಸ ಮತ್ತು ಗೌರವ ಎಷ್ಟು ಮುಖ್ಯವಾಗುತ್ತದೆಯೆಂದು ಅವರನ್ನು ಕೇಳಿ.

## ಇ.ಮಾತನಾಡುವ ಆಟ

ತರಗತಿಯ ಮಕ್ಕಳೊಂದಿಗೆ ಹರಿತವಾದ ಧ್ವನಿಯಲ್ಲಿ ಸ್ನೇಹಪೂರ್ವಕ ಒಳ್ಳೆಯ ಮಾತುಗಳನ್ನು ಹೇಳಿ ನಂತರ ಸ್ನೇಹಪೂರ್ವಕ ಧ್ವನಿಯಲ್ಲಿ ನೀವು ಬಹಳ ಪುಂಡ ಮಕ್ಕಳಾಗಿದ್ದೀರ ನನಗೆ ನಿಮ್ಮೆಲ್ಲರ ಮೇಲೆ ಸಿಟ್ಟು ಬಂದಿದೆ ಎಂದು ಹೇಳಿ

- ಇದು ಸಂವಹನಕ್ಕೆ ಸ್ವರ ಮತ್ತು ಅದರ ಏರಿಳಿತಗಳು ಎಷ್ಟು ಮುಖ್ಯ ಎಂದು ತಿಳಿಸುತ್ತದ
- ಆಟಿಸಂ ಇರುವ ವ್ಯಕ್ತಿಗಳಿಗೆ ಇವು ಗೊತ್ತಾಗದೇ ಇರಬಹುದು

## ಈ. ಆಲಿಸುವ /ತಿಳಿಯುವ ಆಟ

ತರಗತಿಯನ್ನು ಉದ್ದೇಶಿಸಿ ಅರ್ಥವಾಗದ ವಿದೇಶೀ ಭಾಷೆಯಲ್ಲಿ ಒಬ್ಬ ವಿದ್ಯಾರ್ಥಿಯನ್ನೇ ನೋಡುತ್ತಾ ಮಾತನಾಡಿ ಸನ್ನೆ ಮಾಡುತ್ತಾ ಅವರನ್ನು ನಿಂತುಕೊಳ್ಳಲು ಹೇಳಿ. ಅವರು ನಿಂತಾಗ ಏಕೆ ನಿಂತುಕೊಂಡರೆಂದು ಕೇಳಿ. ನೀವು ಸನ್ನೆ ಮಾಡಿದ್ದು ಅವರು ನಿಂತುಕೊಳ್ಳ ಎಂದು ಅಲ್ಲ ಬೇರೆ ಇನ್ನೇನನ್ನೋ ಮಾಡಲು ಹೇಳಿದ್ದು (ನಿಮ್ಮ ಸನ್ನೆ ಏನನ್ನು ತೋರಿಸುತ್ತದೆ ಎಂಬುದರ ಮೇಲೆ ಅವಲಂಬಿತವಾಗಿದೆ) ಎಂದು ಹೇಳಿ.

- ಭಾಷೆಯ ಬಳಕೆಯಲ್ಲಿ ಮೌಖಿಕವಲ್ಲದ ಸುಳಿವುಗಳು (ಆಂಗಿಕ ಭಾಷೆ) ಎಷ್ಟು ಮುಖ್ಯವಾಗುತ್ತದೆ ಮತ್ತು ನಾವು ಸಹಜವಾಗಿ ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬುದನ್ನು ತೋರಿಸುತ್ತದೆ.
- ಆಟಿಸಂ ಇರುವ ವ್ಯಕ್ತಿಗಳಿಗೆ ಮೌಖಿಕವಲ್ಲದ ಸುಳಿವುಗಳನ್ನು ಅನುಸರಿಸಲು ಸಾಧ್ಯವಾಗುವುದಿಲ್ಲ ಅವರು ಅದನ್ನು ಗಮನಿಸುವುದಿಲ್ಲ ಅಥವಾ ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ ಎಂಬುದನ್ನು ವಿವರಿಸಿ.

## ಉ.ಸ್ನೇಹಿತರನ್ನು ಮಾಡಿಕೊಳ್ಳುವ ಆಟ

ಮಾರ್ಕ್ ಸೆಗರ್ (Mark Segar) ಎಂಬ ಆಸ್ಪರ್ಗರ್ಸ ಸಿಂಡ್ರೋಮ್ ಇರುವ ಯುವಕ ಆಸ್ಪಗರ್ಸ ಮತ್ತು ಆಟಿಸಂ ಇರುವ ಇತರರಿಗೆ ಜನರ ಜೊತೆ ಹೇಗೆ ಪರಸ್ಪರ ಸಂಭಾಷಣೆ ನಡೆಸಬೇಕು ಮತ್ತು ಸಂವಹನ ಮಾಡಬೇಕು ಎಂಬುದರ ಬಗ್ಗೆ ಜೀವನ ಸಲಹೆಗಾಗಿ ಸೂಚನೆ ತನ್ನ ನಿಯಮಗಳ ಒಂದು ಪಟ್ಟಿ ಮಾಡಿದ್ದಾರೆ. ತರಗತಿಯೊಡನೆ ಈ ಉದಾಹರಣೆಗಳನ್ನು ಹಂಚಿಕೊಳ್ಳಿ.

- ನಿಮಗೆ ಬೇರೆಯವರೊಂದಿಗೆ ಮಾತನಾಡಬೇಕೆಂದಿದ್ದರೆ, ಮೊದಲ ಭೇಟಿಯಲ್ಲಿ ಅವರ ಜೊತೆ ಬರೀ ಮಾತನಾಡಿ, ಅವರಿಗೆ ತುಂಬಾ ಹತ್ತಿರ ಹೋಗಬೇಡಿ.

- ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಅವರಿಗೆ ಸೂಕ್ತವೆನಿಸಿದ ವೈಯುಕ್ತಿಕ ಗಡಿರೇಖೆಗಳು ಭಿನ್ನವಾಗಿರುತ್ತವೆ (ಅವರ ಅಂಗಿಕ ಬಾಷೆಯನ್ನು ಗಮನಿಸಿ).
- ತುಂಬಾ ಉತ್ಸುಕನಾಗಿರುವಂತೆ ತೋರಿಸಿಕೊಳ್ಳಬೇಡಿ
- ನೀವು ಗಂಡಸಾಗಿದ್ದರೆ, ಕ್ಷೌರದ ನಂತರ ಹಚ್ಚಿಕೊಳ್ಳುವ ಲೋಷನ್ ಅನ್ನು ಬಹಳ ಹಚ್ಚಿಕೊಳ್ಳಬೇಡಿ.
- ಯಾರ ಜೊತೆಗೋ ಹರಟೆ ಹೊಡೆಯಲು ಹೋಗಬೇಡಿ, ಅವರು ನೀವು ಇಷ್ಟಪಡುವವರು ಖಚಿತಪಡಿಸಿಕೊಳ್ಳಿ.

ತರಗತಿಯಲ್ಲಿ ಇದನ್ನು ಕೇಳಿ. ನೀವು ಹೊರಗೆ ಹೋದಾಗ ಏನು ಮಾಡುತ್ತೀರ? ನೀವು ಯಾರ ಜೊತೆಯಲ್ಲಾದರೂ ಹೋಗುತ್ತೀರ? ನೀವು ಗೆಳತಿಯನ್ನು ಹೇಗೆ ಮಾಡಿಕೊಳ್ಳುತ್ತೀರ? ಜನರ ಜೊತೆ ಹೇಗೆ ಮಾತಾಡಬೇಕು, ವ್ಯವಹರಿಸಬೇಕು ಎಂದು ತಿಳಿಯದೆ ಇರುವವರು ಇದನ್ನೆಲ್ಲಾ ಮಾಡವುದು ಹೇಗಿರುತ್ತದೆ ಎಂದು ತರಗತಿಯಲ್ಲಿ ಕೇಳಿ.

## ಊ.ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಆಟ

ಇಬ್ಬರು ವಿದ್ಯಾರ್ಥಿಗಳನ್ನು 5 ಮೀ ಅಂತರದ ಸ್ಥಳದಲ್ಲಿ ಎದುರು ಬದುರಾಗಿ ನಿಲ್ಲಿಸಿ. ಒಬ್ಬರನ್ನು ಇನ್ನೊಬ್ಬರ ಕಡೆಗೆ ನಡೆದು ಹೋಗಿ ಎಲ್ಲಿಯವರೆಗೆ ಹೊಂದರೆ ಹಿತವೆನ್ನಿಸುತ್ತದೆಯೇ ಅಲ್ಲಿ ನಿಲ್ಲಲು ಹೇಳಿ ಅಷ್ಟು ದೂರವಿದ್ದರ ಏಕೆ ಹಿತ/ಸೂಕ್ತ ವೆನ್ನಿಸುತ್ತದೆಯೋ ಎಂಬುದನ್ನು ಕೇಳಿ.

- ಈಗ ಅವರಿಬ್ಬರಿಗೂ ಒಂದು ಹೆಜ್ಜೆ ಹತ್ತಿರ ಹೋಗಲು ಹೇಳಿ ನಂತರ ಇನ್ನೊಂದು ಹೆಜ್ಜೆ ಹೀಗೆ ಅವರು ಒಬ್ಬರಿಗೊಬ್ಬರು ತಾಕುವಷ್ಟು ಹತ್ತಿರ ಹೋಗಲಿ. ಆ ಮೇಲೆ ಇಬ್ಬರನ್ನೂ ಜೊತೆಗೂಡಿಸಿ.
- ಇಷ್ಟೊಂದು ಸಾಮಿಪ್ಯ ಸೂಕ್ತವೇ ಎಂದು ಕೇಳಿ. ಉದಾಃ ಬಸ್ಸಿನಲ್ಲಿ, ಫುಟ್ ಬಾಲ್ ಆಟಕ್ಕೆ ಸೇರಿರುವ ಗುಂಪು, ರೈಲಿನಲ್ಲಿ ಇತ್ಯಾದಿ.
- ಈ ರೀತಿ ನಿಂತುಕೊಳ್ಳುವುದು ಎಲ್ಲಿ ಸೂಕ್ತವಲ್ಲ ಎಂದು ಕೇಳಿ. ಉದಾಃ ಸಮುದ್ರ ತೀರದಲ್ಲಿ.
- ಈ ರೀತಿಯ ಜ್ಞಾನವನ್ನು ಎಲ್ಲಾದರೂ ಬರೆದಿಟ್ಟಿದ್ದಾರೆಯೇ ? ಎಂದು ಕೇಳಿ

ನಾವು ಸಹಜವಾಗಿ ಇವುಗಳನ್ನೆಲ್ಲಾ ಮಾಡುತ್ತೇವೆ. ಆದರೆ ಯಾವಾಗಲೂ ಬದಲಾಗುತ್ತಿರುವ ಮತ್ತು ಯಾರನ್ನು ಒಳಗೊಂಡಿದೆ, ಎಲ್ಲಿ ಮತ್ತು ಹೇಗೆ ಎಂಬುದರ ಮೇಲೆ ಅವಲಂಬಿತವಾಗಿರುವ ಸಾಮಾಜಿಕ ನಿಯಮಗಳನ್ನು ಆಟಿಸಂ ಇರುವ ವ್ಯಕ್ತಿಗಳು ಕಲಿಯಬೇಕಾಗುತ್ತದೆ ಎಂಬುದನ್ನು ಎತ್ತಿ ತೋರಿಸಿ.

(ಮೂಲ-ಎನ್ ಎ ಎಸ್.ಆರ್ಗ್.ಯುಕೆ)

## ೧೪.ಆಕರಗಳು


Teaching a child with Autism to Mind read- A Practical Guide. By: Patricia Howlin, Simon Baron and Cohen & Julie Howlin.

Inclusion strategies for participation. Vidyasagar. Chennai.

Articles by Action for Autism. New Delhi.

www.autism-india.org

www.autsim-pdd.Net

www.atusismchatboard.com

www.mugsy.com

www.autistics.com

www.templegrandin.com

www.nas.org.uk


## ೧೫. ಭಾರತದಲ್ಲಿರುವ ಆಟಿಸಂಗೆಂದೇ ನಿರ್ದಿಷ್ಟ ನೋಂದಾಯಿತ ಸಂಸ್ಥೆಗಳು

ಆಕ್ಷನ್ ಫಾರ್ ಆಟಿಸಂ

ಸೆಕ್ಟರ್ 5 ಜಸಲ ಇನ್ ಸ್ಟಿಸ್ಟೂಷನಲ್ ಏರಿಯ

ಸಾಯಿ ನಿಕೇತನ್

ನ್ಯೂ ಡೆಲ್ಲಿ-110 025

Tel-(91-11)-55347422, 30964730

ಇಂಡಿಯ ಆಟಿಸಂ ಫೋರಂ

ಎಸ್-123, ಕಿರ್ಲೋಸ್ಕರ್ ಕಾಲೋನಿ

III ಸ್ಟೇಜ್ IV ಬ್ಲಾಕ್, ಬಸವೇಶ್ವರನಗರ

ಬೆಂಗಳೂರು-560 079, ಕರ್ನಾಟಕ

Tel-(91-80) - 3225279, 3230257

Email:autism@vsnl.com

http://www.autism-india.org

ಆಕ್ಷನ್ ಫಾರ ಎಬಿಲಿಟಿ ಡೆವೆಲಪ್ ಮೆಂಟ &

ಇನ್ ಕ್ಲೂಷನ್ (AADI)

ದಿ ಸ್ಪಾಸ್ಟೀಕ್ಸ್ ಸೋಸೈಟಿ ಆಫ್

ಉತ್ತರ ಭಾರತ

2, ಬಾಲಬಿರ್ ಸಕ್ಸೇನ ಮರ್ಗ, ಹೌಜ್ ಖಾಸ್

ನ್ಯೂ ಡೆಲ್ಲಿ-110 016

ಇನ್ ಸ್ಪೀರೆಷನ್

12ನೇ ಬ್ಲಾಕ್, ಜೆಜೆ & ಸ್ಲಮ್ Deptt

ಎಂ.ಸಿ.ಡಿ., ಕಮ್ಯೂನಿಟಿ ಸೆಂಟರ್, ತಿಲಕ್ ನಗರ್

ನ್ಯೂ ಡೆಲ್ಲಿ

ತಮನ ಅಸೋಸಿಯೆಷನ್ -ಸ್ಕೂಲ್ ಆಫ್ ಹೋಪ್

C.P.W.D ಕಾಲೋನಿ, ವಸಂತ್ ವಿಹಾರ

(ಚಿನ್ಮಯ ಸ್ಕೂಲ್ ಹತ್ತಿರ)

ನ್ಯೂ ಡೆಲ್ಲಿ -110 057

Email:info@ashaforautism.Com

http://www.ashaforautism.com

ಫೋರಂ ಫಾರ್ ಆಟಿಸಂ

2ನೇ ಮಹಡಿ, ಬ್ಲಾಕ್ ಎ, ಜೇಸ್ವರಮ್ ಬಾಗ್

ಡಾ॥ ಆಂಬೇಡ್ಕರ್ ರೋಡ್, ಡಾಡರ್

ಮುಂಬಾಯಿ-400 014, ಮಹಾರಾಷ್ಟ್ರ

Email.forumforautism@hotmail.com

ಸೋಪನ್

ಎ-4 ಸಿಲ್ವರ್ ಆರ್ಚ್, ರಾಮ್ ನಗರ್

ಬೋರಿವಲಿ (W)

ಮುಂಬಾಯಿ-400 0092, ಮಹಾರಾಷ್ಟ್ರ

Tel (91-22) - 28064443, 28864183

ಉಮೇದ್ ಚೈಲ್ಡ್ ಡೆವೆಲಪ್ ಮೆಂಟ್ ಸೆಂಟರ್

ನೆಲ ಮಹಡಿ, ಮಂತ್ರಿ ಪ್ರೈಡ್

1-B, 1/62, ಎನ್.ಎಂ.ಜೋಶಿ ಮರ್ಗ

ಸುಭಾಷ ನಗರ

ಚಿಂಚ್ಪೋಕ್ಲಿ ಸ್ಟೇಷನ್ ಹತ್ತಿ

ಲೊವರ್ ಫಾರೆಲ

ಮುಂಬಾಯಿ- 400 011, ಮಹಾರಾಷ್ಟ್ರ

Tel- (91-22) - 65528310 65564054

23002006, 23001144

Email.ummeed@uvsnl.net

ಮನೋವಿಕಾಸ ಕಾಂಪ್ರೆಹೆನ್ಸಿವ್

ರಿಹಾಬಿಟೇಷನ್ & ರಿರ್ಸಚ್ ಸೆಂಟರ್

ಎ-267, ಸುರಜ್ ಮಾಲ್ ವಿಹಾರ್

ಡೆಲ್ಲಿ -110 092

ಸಂಭವ

ಬಿ-4/24, ಚಿತ್ರಕೂಟ್

ಆಜ್ಮೀರ್ ರಸ್ತೆ, ಜೈಪೂರ್, ರಾಜಸ್ಥಾನ್

Tel: (91) - 9214350987

ಮೂಮೆಂಟ್ ಫಾರ್ ಆಟಿಸಂ

ಹೌಸ್ ನಂ.216, ರಾಮಚಂದ್ರಪುರಂ

ಜಾಲಹಳ್ಳಿ ಅಂಚೆ

ಬೆಂಗಳೂರು-560 013, ಕರ್ನಾಟಕ

Tel: (91-80) - 28391050

Email.swapnatn@vsnl.com

ವಿ ಕಾನ್ ಟ್ರಸ್ಟ್

ರಿರ್ಸಚ್ ಸೆಂಟರ್

4/370, ದಕ್ಷಿಣ ಫಸ್ಟ್ ಮುಖ್ಯರಸ್ತೆ,

ಕಾಪಾಲೇಶ್ವರ ನಗರ, ನೀಲಂಗರೈ

ಚೆನ್ನೈ - 600 041, ತಮೀಳು ನಾಡು

Tel : (91-44) -55461010

ವಿ ಕಾನ್ ಟ್ರಸ್ಟ್

ಸಂಖ್ಯೆ 4/2 ಪಾರ್ಸ್ಕ್ ರಿವೇರಿಯಾ

4 ನೇ ಮುಖ್ಯ ರಸ್ತೆ ಎಕ್ಸ್‌ಟ್ನ್, ಕೊಟ್ಟೂರ್ಪುರಂ,

ಚೆನ್ನೈ - 600085, ತಮಿಳುನಾಡು

Tel:(91-44)-24464655, 24473136, 4464077

Email.wecantrust@rediffmail.com

ಪ್ರದೀಪ್ ಸೆಂಟರ್ ಫಾರ್ ಆಟಿಸಂ

ಮ್ಯಾನೇಜ್ಮೆಂಟ್

203/B, ಬ್ಲಾಕ್ B, ಪೋಸ್ಟ್-ಲೇಕ್ ಟೌನ್,

ಕೋಲ್ಕತ್ತಾ - 700 089, ಪಶ್ಚಿಮ ಬಂಗಾಳ

ಆಟಿಸಂ ಸೊಸೈಟಿ ಪಶ್ಚಿಮ ಬಂಗಾಳ

22 ಅಂಜುಮನ್ ಅರಾ ಬೇಗಂ ರೋ

ಕೋಲ್ಕತ್ತಾ - 700 033, ಪಶ್ಚಿಮ ಬಂಗಾಳ

Tel: (91-33)-24730706, 24170860

Email: autismsocietywb@hotmail.com

## ಆಟಿಸಂ ಸ್ಪೆಕ್ಟ್ರಮ್ ಡಿಸಾರ್ಡರ್ ಗಾಗಿ ಶಾಲೆಗಳು (ವರ್ಣಮಾಲೆಯ ಪ್ರಕಾರ)

ಒಪೇನ್ ಡೋರ್

ಸೆಕ್ಟರ್ 5 ಜಸೋಲಾ ವಿಹಾರ್

ಸಾಯಿ ನಿಕೇತನ್ ನವದೆಹಲಿಯ ಹಿಂದೆ-110025

Tel: (91-11)-65347422, 40540991/2

ಫ್ಯಾಕ್ಸ್: (91-11) 40540993

Email: autism@vsnl.com

http://www.outism-

india.org/afa_opendoor.htm

ಆಟಿಸಂ ಕೇಂದ್ರ

c/o ಪ್ರಸನ್ನ ಆಸ್ಪತ್ರೆ

ಡೆಕ್ಕನ್ ಜಿಮ್ಖಾನಾ,

ಪುಣೆ 411 004, ಮಹಾರಾಷ್ಟ್ರ

Tel: (91-20)-25652246

Mail: info@prasanncautism.org

http://www.prasannaoutism.org

ಸ್ಕೂಲ್ ಆಫ್ ಹೋಪ್

CPWD ಕಾಂಪ್ಲೆಕ್ಸ್

ಚಿನ್ಮಯ್ ಸ್ಕೂಲ್ ಹತ್ತಿರ

DEC

C/o ಸ್ಪಾಸ್ಟಿಕ್ಸ್ ಸೊಸೈಟಿ ಆಫ್ ಕರ್ನಾಟಕ

31. 5ನೇ ಕ್ರಾಸ್, 5ನೇ ಮುಖ್ಯ

ಇಂದಿರಾ ನಗರ ಇಸ್ಟ್ ಸ್ಟೇಜ್

ವಸಂತ ವಿಹಾರ್

ನವದೆಹಲಿ-110 057

Tel: (91-11)-26143853, 26151572

Email:tamana@mantramail.com

ಬೆಂಗಳೂರು-560 038, ಕರ್ನಾಟಕ

ಡಿಯುಲಿ ಡೇಕೇರ್ ಸೆಂಟರ್ ಕಮ್ ಪ್ರಿಸ್ಕೂಲ್

841/1, ಆಲ್ಟೊ ಪೊರ್ವೊರಿಮ್,

ಗೋವಾ-403 521

Tel: (91-832)-2414916

ಜ್ಯೋತ್ ವಿಶೇಷ ಶಾಲೆ

ಕುಟಾರ್ಕರ್ ರೆಸಿಡೆನ್ಸಿ.

ವಿವಿಧೋದ್ದೇಶ ಶಾಲೆಯ ಹತ್ತಿರ.

ಬೋರ್ಡಾ, ಮಾರ್ಗೋ, ಗೋವಾ

Tel: (91-832)-2765097

ದಿಶಾ ಚಾರಿಟೇಬಲ್ ಟ್ರಸ್ಟ್

319-320, ರೇಸ್ ಕೋರ್ಸ್ ಟವರ್ಸ್

ಗೋತ್ರಿ ರಸ್ತೆ,

ವಡೋದರಾ 390 007, ಗುಜರಾತ್

Tel: (91-265)-2325250

ಫ್ಯಾಕ್ಸ್: (91-265)-2300059

ಪ್ರಿಯಾಂಜ್ ವಿಶೇಷ ಶಾಲೆ

239/1905 ಮೋತಿಲಾಲ್ ನಗರ ಸಂಖ್ಯೆ 1.

ಅಚ್ಯುತ್ ಬೆಹ್ರೆ ಮಾರ್ಗ.

ಗಣೇಶ ಮಂದಿರದ ಹತ್ತಿರ, ರಸ್ತೆ ಸಂಖ್ಯೆ 4.

ಗೋರೆಗಾಂವ್ (ಪಶ್ಚಿಮ),

ಮುಂಬೈ-400 104, ಮಹಾರಾಷ್ಟ್ರ

Tel: (91-22)-28753880

Email: dishatrust@igara.net

http://www.disha.org

(91)-9821098325

Email:priyani school@yahoo.co.in

ಸಾಯಿರಮ್ ಆಟಿಸಂ

C/o ಜೈ ವಕೀಲ್ ಸ್ಕೂಲ್

ಸೆವ್ರಿ ಹಿಲ್ಸ್, ಸೆವ್ರಿ ರಸ್ತೆ

ಮುಂಬೈ 400 033, ಮಹಾರಾಷ್ಟ್ರ

Tel: (91-22)-24701129,24702285

ಸಮರ್ಪನ್

ಎಂ.ಜಿ.ರೋಡ್, ಮುನಿಪಲ್ ಸ್ಕೂಲ್

ಪರ್ಲ ವಿದ್ಯಾ ತಿಲಕ್ ಮಂದಿರ್

3ನೇ ಮಹಡಿ, ಮರಾಠಿ ಮಾಧ್ಯಮ ಸ್ಕೂಲ್

ಕೆರ್ಸೆಕರ್ ಗಾರ್ಡನ್ ಹತ್ತಿರ

ವಿಲ್ ಪರ್ಲ (ಪೂರ್ವ)

ಮುಂಬಯಿ - 400 057, ಮಹಾರಾಷ್ಟ್ರ

Tel:(91-22)-26336537, 560739987

ಸಂಕಲ್ಪ ಲರ್ನಿಂಗ್ ಸೆಂಟರ್

Q-9. ಹೊಸ ಸಂಖ್ಯೆ. 41, 6ನೇ. ಅವೆನ್ಯೂ.

ಚೆನ್ನೈ-600040

ತಮಿಳುನಾಡು

Tel: (91-44)-42113947

Email: sulata.sankalp@airtelbroadband.in

ಸನ್ನೈನ್ ಸೆಂಟರ್ ಫಾರ್ ಆಟಿಸಂ

280, 6ನೇ ಕ್ರಾಸ್ ದೊಮ್ಮಲೂರು ಲೇಔಟ್

ಬೆಂಗಳೂರು - 71, ಕರ್ನಾಟಕ

Tel: (91-80)-65360892

Emailsunshineautism@vsnl.net

ನಂಬಬಹುದು ????
ಸಂಖ್ಯೆ 4/2 ಪಾರ್ಸ್ನ್ ರಿವೇರಿಯಾ
4ನೇ ಮುಖ್ಯರಸ್ತೆ, ಕೊಟ್ಟೂರ್ಪುರಂ,
ಚೆನ್ನೈ - 600 085 ತಮಿಳುನಾಡು

ವಿದ್ಯಾಸಾಗರ್
ಸಂಖ್ಯೆ-1
ರಂಜಿತ್ ರಸ್ತೆ
ಕೊಟ್ಟೂರ್ಪುರಂ, ಚೆನ್ನೈ - 600 085 ತಮಿಳುನಾಡು

## ಭಾರತದಲ್ಲಿರುವ ಇತರ ಸಂಬಂಧಿತ ಸಂಪರ್ಕಗಳು

ಅಸಾಮರ್ಥ್ಯ ಭಾರತ ನೆಟ್‌ವರ್ಕ್
ಹ್ಯಾಂಡಿಕ್ಯಾಪ್
ಸೊಸೈಟಿ ಫಾರ್ ಚೈಲ್ಡ್ ಡೆವಲಪ್‌ಮೆಂಟ್
ಕಾಟೇಜ್ 15, ಒಬೆರಾಯ್ ಆಪ್ಟ್ಸ್
2 ಶಾಮ್ ನಾಥ್ ಮಾರ್ಗ
ದೆಹಲಿ 110 054
Email: webmaster@disabilityindia.org
http://www.disabilityindia.org/

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್
(NIMH)
ಮನೋವಿಕಾಸ್ ನಗರ
ಸಿಕಂದರಾಬಾದ್ - 500 009, ಆಂಧ್ರ ಪ್ರದೇಶ
Tel: (91-40)-2775 1741-45
ಫ್ಯಾಕ್ಸ್: (91-40)- 2775 0198
Email: hd1_nimhldhk@sancharnet.in
http://www.nimhindia.org/

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಮತ್ತು

ನ್ಯೂರೋ ಸೈನ್ಸಸ್ (ನಿಮ್ಹಾನ್ಸ್)

http://www.nimhans.kar.nic.in/

ಚೆನ್ನೈ ಹೋಲಿಸ್ಟಿಕ್ ಹೆಲ್ತ್ ಸೆಂಟರ್ ಫಾರ್

ಆಟಿಸಂ

ಪ್ಲಾಟ್ ಸಂಖ್ಯೆ: 218, ಪಲ್ಕಲೈ ನಗರ, ಪಲವಕ್ಕಂ

ಚೆನ್ನೈ - 600041, ತಮಿಳುನಾಡು.

Tel: (91-44)-24511670

Email. ism_chhc@hotmail.com

http://www.autismchennai.in

## ಅಸಾಮರ್ಥ್ಯದ ಬಗೆಗಿನ ಶಿಷ್ಟಾಚಾರಗಳು

ಅಸಾಮರ್ಥ್ಯ ಹೊಂದಿರುವ ವ್ಯಕ್ತಿಯು ಮೊದಲು ಒಬ್ಬ ವ್ಯಕ್ತಿಯೆಂಬುದನ್ನು ಯಾವಾಗಲೂ ನೆನಪಿನಲ್ಲಿಡಿ. ವ್ಯಕ್ತಿಯ ಘನತೆಯನ್ನು ಕಾಪಾಡುವ ಮತ್ತು ಅವನನ್ನು ಬಲಿಪಶು ಅಥವಾ ಕರುಣಾಜನಕವಾಗಿ ಬಿಂಬಿಸದ ಭಾಷೆಯನ್ನು ಬಳಸಿ. ಅಪಸ್ಮಾರ ಹೊಂದಿರುವ ವ್ಯಕ್ತಿ (ಅಪಸ್ಮಾರಿಗ ಎನ್ನುವ ಬದಲು) ಎಂಬುದು ಸೂಕ್ತವಾದ ಭಾಷೆ ಏಕೆಂದರೆ ಇಲ್ಲಿ ಒತ್ತು ವ್ಯಕ್ತಿಗೆ ನೀಡಲಾಗಿದ ಅವರ ಅಸಾಮರ್ಥ್ಯಕ್ಕೆ ಅಲ್ಲ. ಗಾಲಿ ಕುರ್ಚಿಯನ್ನು ಬಳಸುವ ವ್ಯಕ್ತಿ ಗಾಲಿಕುರ್ಚಿಗೆ ಅಂಟಿಕೊಂಡಿರುವುದಿಲ್ಲ. (ಗಾಲಿ ಕುರ್ಚಿಯ ವ್ಯಕ್ತಿ ಎಂಬುದು ಸೂಕ್ತವಾಗಿಲ್ಲ) ಅವನು ಒಬ್ಬ ಬಳಕೆದಾರ ಅಷ್ಟೇ.

- ಅಸಮರ್ಥ ವ್ಯಕ್ತಿಯನ್ನು ಅಭಿನಂದಿಸುವಾಗ ಕೈ ಕುಲುಕಲು ಹಿಂಜರಿಯದಿರಿ. ಅವರು ಕೈಕುಲುಕಲು ಸಾಧ್ಯವಾಗದಿದ್ದರೆ ಅದನ್ನು ಹೇಳುತ್ತಾರೆ.
  - ಎಡಗೈಯಿಂದ ಕೈ ಕುಲುಕುವುದು ಸ್ವೀಕಾರಾರ್ಹ.
  - ಕೈ ಕುಲುಕಲು ಸಾಧ್ಯವಿರದವರಿಗೆ, ಅವರ ಉಪಸ್ಥಿತಿಯನ್ನು ಗಉರುತಿಸಲು ಮತ್ತು ಅವರನ್ನು ಸ್ವಾಗತಿಸಲು ಅವರ ಭುಜ ಅಥವಾ ತೋಳನ್ನು ಸ್ಪರ್ಶಿಸಿ.
  - ಗಾಲಿ ಕುರ್ಚಿಗಳನ್ನು ಬಳಸುವ ಜನರನ್ನು, ಅವರು ಅವಲಂಬಿತರು ಎನ್ನುವಂತೆ, ತಲೆ ಅಥವಾ ಭುಜವನ್ನು ತಟ್ಟಬೇಡಿ.

- ಅಂಗವಿಕಲತೆ ಹೊಂದಿರುವ ವ್ಯಕ್ತಿಯನ್ನು ನೇರವಾಗಿ ನೋಡಿ ಮತ್ತು ಮಾತನಾಡಿಸಿ ಅವರ ಜೊತೆ ಇರುವ ದುಭಾಷಿ, ಸಹಾಯಕ ಅಥವಾ ಜೊತೆಗಾರನ ಮೂಲಕ ಮಾತನಾಡಿಸಬೇಡಿ. ವ್ಯಕ್ತಿಯು ಮಾತನಾಡುತ್ತಿರುವುದು ನಿಮಗೆ ಅರ್ಥವಾಗದೆ ಇದ್ದರೆ ಗೊತ್ತಾಯಿತು ಎಂಬಂತೆ ನಟಿಸಬೇಡಿ. ಬದಲಿಗೆ ಮತ್ತೆ ಹೇಳುವಂತೆ ಹೇಳಿ. ನಿಮಗೆ ಅರ್ಥ ಮಾಡಿಕೊಳ್ಳಲು ಇನ್ನೂ ಕಷ್ಟವಾಗಿದ್ದರೆ ಒಂದು ಶಾಂತವಾದ ಸ್ಥಳಕ್ಕೆ ಹೋಗಿ ಅವರನ್ನು ಹೌದು-ಎಲ್ಲ ಎಂಬ ಉತ್ತರಗಳನ್ನು ಹೇಳುವಂತಹ ಸರಳ ಪ್ರಶ್ನೆಗಳನ್ನು ಕೇಳಿ.

- ಒಬ್ಬ ಗಾಲಿ ಕುರ್ಚಿಯನ್ನು ಬಳಸುವ ವ್ಯಕ್ತಿಯನ್ನು ಉದ್ದೇಶಿಸಿ ಮಾತನಾಡುವಾಗ ಅದಕ್ಕೆ ಒರಗಿ ನಿಲ್ಲಬೇಡಿ ಗಾಲಿ ಕುರ್ಚಿಯು ಆ ವ್ಯಕ್ತಿಯ ಒಂದು ವೈಯುಕ್ತಿಕ ಸ್ಥಳವಾಗಿರುತ್ತದೆ.
  - ಒಬ್ಬ ಗಾಲಿ ಕುರ್ಚಿಯನ್ನು ಬಳಸುವ ವ್ಯಕ್ತಿಯ ಜೊತೆ ಕೆಲವು ನಿಮಿಷಕ್ಕಿಂತ ಹೆಚ್ಚಿಗೆ ಮಾತನಾಡುತ್ತಿದ್ದರೆ ಸಾಧ್ಯವಾದರೆ ಒಂದು ಕುರ್ಚಿಯನ್ನು ಬಳಸಿ. ಇದರಿಂದ ನೀವು ವ್ಯಕ್ತಿಯ ಕಣ್ಣಿನ ನೇರಕ್ಕೆ ಕುಳಿತು ಅವರ ಜೊತೆ ಸಂಭಾಷಣೆ ನಡೆಸಲು ಸಾಧ್ಯವಾಗುತ್ತದೆ.
  - ಒಬ್ಬ ಕಣ್ಣು ಕಾಣದ ಅಥವಾ ಕಡಿಮೆ ದೃಷ್ಟಿ ಇರುವ ವ್ಯಕ್ತಿಯನ್ನು ಅಭಿನಂದಿಸುವಾಗ ನಿಮ್ಮ ಮತ್ತು ನಿಮ್ಮ ಜೊತೆಗಿರುವವರ ಪರಿಚಯನ್ನು ಕೊಠಡಿಯನ್ನು ಪ್ರವೇಶಿಸುವಾಗ ಮತ್ತು ಅಲ್ಲಿಂದ ಹೊರಡುವಾಗ ಯಾವಾಗಲೂ ನೀಡಿ.
  - ಸಹಾಯವನ್ನು ಗೌರವಯುತವಾಗಿ ಸೂಕ್ಷ್ಮತೆಯಿಂದ ನೀಡಿ. ನಿಮ್ಮ ಸಹಾಯದ ನಿರಾಕರಣೆಗೆ ಸಿದ್ಧರಾಗಿರಿ. ಸಹಾಯವನ್ನು ನಿರಾಕರಿಸಿದರೆ, ಮತ್ತೆ ಸಹಾಯ ಮಾಡಲು ಹೋಗಬೇಡಿ. ಸಹಾಯ ಸ್ವೀಕರಿಸಿದರೆ ಅವರ ಸೂಚನೆಗಳನ್ನು ಕೇಳಿ ಅಥವಾ ಒಪ್ಪಿಕೊಳ್ಳಿ.
  - ದೃಷ್ಟಿ ದೋಷವಿರುವವರಿಗೆ ನಿಮ್ಮ ತೋಳನ್ನು ಮೊಣಕೈ ಬಳಿ ಹಿಡಿದುಕೊಳ್ಳಲು ಬಿಡಿ. ಇದು ನೀವು ಅವರನ್ನು ಮುಂದೆ ದೂಡದೆ, ಅವರಿಗೆ ಮಾರ್ಗದರ್ಶನ ನೀಡಲು ಸಹಾಯ ಮಾಡುತ್ತದೆ.
  - ಮುಟ್ಟುವುದು ಅಥವಾ ಕೈಯನ್ನು ಆಡಿಸುವುದರ ಮೂಲಕ ಕಿವುಡತೆಯಿರುವ ವ್ಯಕ್ತಿಯ ಗಮನವನ್ನು ಸೆಳೆಯಿರಿ. ಕಿವುಡತೆಯಿರುವ ಎಲ್ಲಾ ವ್ಯಕ್ತಿಗಳೂ ತುಟಿಯ ಅಲುಗಾಟವನ್ನು ಓದಲಾರರು ಅಥವಾ ಸಂಕೇತ ಭಾಷೆಯನ್ನು ಉಪಯೋಗಿಸಲಾರರು. ಆದರೆ ಅವರಿಗೆ ಪೇಪರ್ ಮತ್ತು ಪೆನ್ಸಿಲ್ ನ್ನು ಉಪಯೋಗಿಸುವ ಆದ್ಯತೆಯಿದ್ದರೆ ನೀವು ಅದನ್ನು ಬಳಸಬಹುದು. ನೀವು ಮಾತನಾಡುತ್ತಿರುವ ವ್ಯಕ್ತಿಯ ಎದುರಿಗೆ ನಿಂತುಕೊಳ್ಳಿ ಮತ್ತು ಉತ್ಪ್ರೇಕ್ಷೆ ಮಾಡದೆ ಸಹಜ ದನಿಯಲ್ಲಿ ಮಾತನಾಡಿ.

- ಅಸಮರ್ಥತೆ ಇರುವ ವ್ಯಕ್ತಿಯನ್ನು ದಿಟ್ಟಿಸಿ ನೋಡುವುದು ಉಚಿತವಲ್ಲ. ಮಗುವೇನಾದರೂ ಆ ವ್ಯಕ್ತಿಯ ಬಗ್ಗೆ ಕೇಳಿದರೆ ಗದರಿಸಿ ಸುಮ್ಮನಾಗಿಸಬೇಡಿ. ಬದಲಿಗೆ ಸರಳವಾಗಿ ವಾಸ್ತವಿಕತೆಯನ್ನು ಮಗುವಿಗೆ ತಿಳಿಸಿ. ಇದರಿಂದ ಅಂಗವಿಕಲತೆಯು ಸಾಮಾನ್ಯ ಜೀವನದ ಒಂದು ಭಾಗ ಮತ್ತು ಋಣಾತ್ಮಕವಾದದ್ದು ಏನು ಇಲ್ಲ ಎಂಬುದು ಮಗುವಿಗೆ ಅರ್ಥವಾಗುತ್ತದೆ. ಉದಾ; "ರಾಧಾಳಿಗೆ ತನ್ನ ಕಾಲುಗಳನ್ನು ಉಪಯೋಗಿಸುವುದರಲ್ಲಿ ತೊಂದರೆಯಿರುವುದರಿಂದ ಸುತ್ತಮುತ್ತ ಓಡಾಡಲು ಗಾಲಿಕುರ್ಚಿಯನ್ನು ಬಳಸುತ್ತಾಳೆ ನೀನು ನಿನ್ನ ಕಾಲುಗಳನ್ನು ಉಪಯೋಗಿಸಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಆಕೆಯೂ ತನ್ನ ಗಾಲಿ ಕುರ್ಚಿಯನ್ನು ಬಳಸಿ ಓಡಬಲ್ಲಳು".
- ಯಾರಾದರೂ ನಿಮ್ಮ ಅನುಭವದ ಪರಿಧಿಗ ಬಾರದಂತೆ ಅಥವಾ ನಿಮಗೆ ತಕ್ಷಣ ಅರ್ಥವಾಗದಂತೆ ವರ್ತಿಸುತ್ತಿದ್ದರೆ ಆ ವ್ಯಕ್ತಿಗೆ ಯಾವುದೇ ಗೋಚರವಾಗದಂತಹ ಪರಿಗಣಿಸಿ. ಉದಾಹರಣೆಗೆ ಗಲಭೆಯಿರುವ ಅಥವಾ ಕತ್ತಲಿನ ವಾತಾವರಣ, ಅಥವಾ ಅನೇಕ ಜನ ಒಟ್ಟಿಗೆ ಮಾತನಾಡುತ್ತಿರುವುದು ಇಂತಹ ಸಂದರ್ಭಗಳಲ್ಲಿ ಅಗೋಚರ ವಿಕಲತೆಯಿರುವ ವ್ಯಕ್ತಿಗಳಿಗೆ ಸಂಭಾಷಣೆಯಲ್ಲಿ ಪೂರ್ಣವಾಗಿ ಭಾಗವಹಿಸಲು ಕಷ್ಟವಾಗುತ್ತದೆ. ಕಡಿಮೆ ದೃಷ್ಟಿ, ಅಪಸ್ಮಾರದ ರೋಗ, ಕಿವುಡುತನ, ಕಲಿಕಾನ್ಯೂನ್ಯತೆ, ತಲೆಯ ಗಾಯಗಳು, ಮಾನಸಿಕ ರೋಗಗಳು ಮತ್ತು ಸಂಧಿವಾತದಂತಹ ಕಾಯಿಲೆಗಳು ಮುಂತಾದವುಗಳನ್ನು ಅಗೋಚರ ವಿಕಲತೆಗಳು ಒಳಗೊಂಡಿರಬಹುದು.
- ಅಸಮರ್ಥತೆ ಇರುವ ವ್ಯಕ್ತಿಯ ಜೊತೆ ಬೇರೆಯವರೊಡನೆ ಹೇಗೆ ಮಾತನಾಡುತ್ತೀರೋ ಹಾಗೇ ಮಾತನಾಡಿ. ಕುರುಡುತನವಿರುವ ವ್ಯಕ್ತಿಗೆ 'ನಿನ್ನನ್ನು ನಂತರ ಕಾಣುತ್ತೇನೆ' ಎಂದು, ಎಂದು ಊರುಗೋಲು ಅಥವಾ ಗಾಲಿ ಕುರ್ಚಿಯನ್ನು ಉಪಯೋಗಿಸುವ ವ್ಯಕ್ತಿಗೆ 'ನಾನು ಈಗ ಓಡಬೇಕು' ಎಂದು ಖಂಡಿತ ಹೇಳಬಹುದು.
-

ಪಠ್ಯ ಕೃಪೆ: ಅಂಗವಿಕಲತೆ ಬಗೆಗಿನ ಶಿಷ್ಟಾಚಾರದ ಕೈಪಿಡಿ, ಸಿಟಿ ಆಫ್ ಸ್ಯಾನ್ ಆಂಟೇನಿಯೋ ಡಿಸೆಬಿಲಿಟಿ ಆಕ್ಸೆಸ್ ಆಫೀಸ್, ಯು.ಎಸ್

ಚಿತ್ರಗಳು: ಕನ್ವಲ್ ಸಿಂಗ್, ಆಕ್ಷನ್ ಫಾರ್ ಎಬಿಲಿಟಿ ಡೆವಲಪ್ ಮೆಂಟ್ ಅಂಡೆ ಇನ್ ಕ್ಲೂಷನ್ (ಎಎಡಿಐ)